ಜನಮನದ ದನಿ
# ಪ್ರಜೋದಯ
ಸಂಪಾದಕ : ಜೆ.ಆರ್. ಕೆಂಚೇಗೌಡ



ಚೆನ್ನೋನಿನ ವಿಲ್ಲೋಮೂರ್ ಪಾರ್ಕ್‌ನಲ್ಲಿ ನಡೆದ 19 ವರ್ಷದೊಳಗಿನವರ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ನಡೆದ ಅಂತಿಮ ಏಕದಿನ ಪಂದ್ಯವನ್ನು ಭಾರತ 233 ರನ್‌ಗಳ ಭಾರೀ ಅಂತರದ ಗೆಲುವು ಸಾಧಿಸಿದೆ.

08 ಜನವರಿ 2026 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 296 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸಿದ್ದರಾಮಯ್ಯ ರಾಜಕೀಯ ಚಿಂತನೆಯ ಹೃದಯ ಭಾಗವೇ ಸಾಮಾಜಿಕ ನ್ಯಾಯ » 2



ಯೋಜನೆ ಅನುಷ್ಠಾನದಲ್ಲಿ ಕಾರ್ಯಾಂಗದ ಮಹತ್ವವೂ ಇದೆ » 3



ಮೌಢ್ಯತೆ ಹೋಗಲಾಡಿಸಲು ವಿಜ್ಞಾನ ಬದ್ಧ ಚಿಂತನೆ ಹೆಚ್ಚಲಿ » 4

# ಸ್ಥಳೀಯ ಸಂಸ್ಥೆ ಗೆಲುವಿಗೆ ಕಾರ್ಯತಂತ್ರ: ಬಿಎಸ್‌ವೈ

## ಉಪಚುನಾವಣೆ, ವಿಧಾನ ಪರಿಷತ್, ಮುಂಬರುವ ವಿಧಾನಸಭೆ ಚುನಾವಣೆಗೂ ಪಕ್ಷ ಸಂಘಟನೆ

• ಪ್ರಜೋದಯ ವರದಿ

**ಬೆಂಗಳೂರು:** ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಗೆಲ್ಲಲು ಸೂಕ್ತ ಕಾರ್ಯತಂತ್ರ ರೂಪಿಸಲಾಗುವುದೆಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ, ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲೂ ಗೆಲುವು ಸಾಧಿಸುವುದರ ಜೊತೆಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಬಹುಮತದೊಂದಿಗೆ ಸರ್ಕಾರ ರಚಿಸಬೇಕೆಂಬ ಉದ್ದೇಶದಿಂದ ಪಕ್ಷವನ್ನು ಸಂಘಟಿಸಲಾಗುತ್ತಿದೆ ಎಂದು ತಿಳಿಸಿದರು.

ಈಗಾಗಲೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ



ಬಾರಿಸುತ್ತಿದೆ. ಮುಂದಿನ ಚುನಾವಣೆಯಲ್ಲೂ ಬಿಜೆಪಿ ನಿಶ್ಚಿತವಾಗಿ ದೊಡ್ಡ ಬಹುಮತದೊಂದಿಗೆ ಗೆಲ್ಲುತ್ತದೆ. ರಾಜ್ಯದ ಜನತೆ ಈಗ ಬಿಜೆಪಿ ಪರವಾಗಿದ್ದಾರೆ. ಕಾರ್ಯಕರ್ತರು ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ಮತ್ತು ಎಲ್ಲಾ ಚುನಾವಣೆಗಳಲ್ಲಿ ಗೆಲುವು ಸಾಧಿಸುತ್ತೇವೆಂದು ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಎಲ್ಲಾ ಜಿಲ್ಲೆಗಳ ಪ್ರಮುಖ ನಾಯಕರ ಜೊತೆ ನಿರಂತರ ಸಭೆಗಳನ್ನು ನಡೆಸುತ್ತಿದ್ದಾರೆ. ರಾಜ್ಯ ಸರ್ಕಾರದ ದುರಾಡಳಿತದಿಂದ ಜನತೆ ಬೇಸತ್ತು ಹೋಗಿದ್ದಾರೆ.

### ದೇವೇಗೌಡರಿಗೆ ನಾವು ಬೇಡವಾಗಿದ್ದೇವೆ

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ವಿಚಾರವಾಗಿ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ನೀಡಿದ್ದ ಹೇಳಿಕೆಗೆ ಮಾಜಿ ಸಚಿವ ನಾರಾಯಣಗೌಡ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯಾಧ್ಯಕ್ಷರು ನಮ್ಮನ್ನು ಸಭೆಗೆ ಕರೆಸಿದ್ದರು. ಸ್ಥಳೀಯ ಚುನಾವಣೆ ಸಂಬಂಧ ದೇವೇಗೌಡರು ಹೇಳಿಕೆ ನೀಡಿದರು. ನಾವು ನಮ್ಮ ಹಕ್ಕನ್ನು ಬಿಟ್ಟುಕೊಟ್ಟೆವು, ನಮ್ಮ ಲೋಕಸಭಾ ಸ್ಥಾನವನ್ನೂ ತ್ಯಾಗ ಮಾಡಿದೆವು. ಅವರು ಗೆದ್ದರು, ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರದಲ್ಲಿ ಸಚಿವರಾದರು. ಆದರೆ, ಈಗ ಅವರಿಗೆ ನಾವು ಬೇಡವಾಗಿದ್ದೇವೆಂದು ಆರೋಪಿಸಿದರು.

ಈ ಎಲ್ಲಾ ವಿಚಾರಗಳನ್ನು ಜನರಿಗೆ ಮನದಟ್ಟು ಮಾಡುವುದರ ಜೊತೆಗೆ, ಸ್ಥಳೀಯ ಸಂಸ್ಥೆ ಚುನಾವಣೆ ಗೆಲ್ಲಲು ಸಂಘಟನಾತ್ಮಕವಾಗಿ ಕೆಲಸ ಮಾಡಲಾಗುವುದೆಂದು ಹೇಳಿದರು.

**ಹೋಲಿಕೆ ಮಾಡುವುದು ಬೇಡ**

ಸಿದ್ದರಾಮಯ್ಯ ದೇವರಾಜ ಅರಸು ದಾಖಲೆ ಮುರಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ದೇವರಾಜ ಅರಸು ಅವರ ಆಡಳಿತಕ್ಕೂ ಸಿದ್ದರಾಮಯ್ಯ ಆಡಳಿತಕ್ಕೂ ಹೋಲಿಕೆ ಮಾಡುವುದು ಬೇಡ. ಸಿದ್ದರಾಮಯ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ದೇವರಾಜ ಅರಸು ಆಡಳಿತ ವೈಖರಿ ಬೇರೆ, ಸಿದ್ದರಾಮಯ್ಯ ಆಡಳಿತ ವೈಖರಿ ಬೇರೆ. ಈ ಸಮಯದಲ್ಲಿ ಸಿದ್ದರಾಮಯ್ಯ ದೊಡ್ಡ ಸಾಧನೆ ಮಾಡಿದ್ದೇನೆಂದು ತೋರಿಸಿದ್ದನ್ನು ಜನರು ಮೆಚ್ಚುವುದಿಲ್ಲ ಎಂದರು.

### ಉಪಚುನಾವಣೆ ಮೇಲೆ ಕಣ್ಣು

ವಿಧಾನಸಭೆಯ 2 ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಲಿದ್ದು, ವಿಧಾನ ಪರಿಷತ್ 4 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಈ ಹಿನ್ನಲೆ ಆಡಳಿತ ಪಕ್ಷ ಕಾಂಗ್ರೆಸ್ ಹಾಗು ವಿಪಕ್ಷ ಬಿಜೆಪಿ ರಣತಂತ್ರ ರೂಪಿಸುತ್ತಿದೆ.

ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರ ನಿಧನದಿಂದಾಗಿ ಎರಡು ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆಯಬೇಕಿದೆ.

ಮುಖ್ಯಮಂತ್ರಿ ಕುರ್ಚಿಗಾಗಿ ಆಂತರಿಕ ಕಚ್ಚಾಟ ಕಾಂಗ್ರೆಸ್‌ನಲ್ಲಿ ಮುಂದುವರಿಯುತ್ತಲೇ ಇದೆ, ಸರ್ಕಾರದಲ್ಲಿ ಆಡಳಿತ ವೈಖರಿ ಸರಿಯಾಗಿಲ್ಲ, ಸಿದ್ದರಾಮಯ್ಯ ಅವರದ್ದು ಸಾಧನೆ, ದಾಖಲೆ ಎಂದು ಹೇಳಲು ಏನೂ ಇಲ್ಲ ಎಂದರು.

# ವಿಮಾನ ನಿಲ್ದಾಣ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ

## ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಸೂಚನೆ

• ಪ್ರಜೋದಯ ವರದಿ

**ಹಾಸನ :** ನಗರದ ವಿಮಾನ ನಿಲ್ದಾಣ ಕಾಮಗಾರಿಗೆ ಬಾಕಿ ಇರುವ ಭೂ ಸ್ವಾಧೀನ ಪ್ರಕ್ರಿಯೆ ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಅವರು ಸೂಚನೆ ನೀಡಿದರು.

ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ವಿಮಾನ ನಿಲ್ದಾಣ ಕಾಮಗಾರಿ ಹಾಗು ರಾಷ್ಟ್ರೀಯ ಹೆದ್ದಾರಿ-206 ಯೋಜನೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಜಾಗವನ್ನು ಭೂ ಸ್ವಾಧೀನ ಪಡಿಸಿಕೊಂಡು ರೈತರಿಗೆ ಪರಿಹಾರ ಮೊತ್ತ ಪಾವತಿಸಿ, ರಸ್ತೆ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಕೆ.ಐ.ಎ.ಡಿ.ಬಿ. ವತಿಯಿಂದ ಒಟ್ಟು 91 ಎಕರೆ 32 ಗುಂಟೆ ಭೂಸ್ವಾಧೀನ



ಪಡಿಸಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ರೈತರಿಗೆ ಪರಿಹಾರದ ಮೊತ್ತ ಪಾವತಿಸಲು ಒಟ್ಟು 143.67 ಕೋಟಿ ರೂ. ಅನುದಾನ ಬಿಡುಗಡೆಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ತ್ವರಿತವಾಗಿ ಕ್ರಮ ವಹಿಸಲಾಗುವುದು. ಭೂ ಸ್ವಾಧೀನ ಪ್ರಕ್ರಿಯೆ ಬಾಕಿ ಇರುವ ಜಮೀನಿಗೆ ಸಂಬಂಧಿಸಿದಂತೆ ದರ ನಿಗದಿ ಸಮಿತಿಯ ಮುಂದಿಟ್ಟು ಕೂಡಲೇ ಸಭೆ ನಡೆಸಿ ದರ ನಿಗದಿ ಪಡಿಸುವ ಜೊತೆಗೆ ಜಂಟಿ ಸರ್ವೆ ಕಾರ್ಯವನ್ನು ನಡೆಸುವಂತೆ ನಿರ್ದೇಶನ ನೀಡಿದರು.

ವಿಮಾನ ನಿಲ್ದಾಣ ಕಾಮಗಾರಿಗೆ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಲ್ಲಿ ಹಾದು ಹೋಗಿರುವ ಹೈಟೆನ್ಶನ್ ವಿದ್ಯುತ್ ಲೈನ್ ಸ್ಥಳಾಂತರಕ್ಕೆ ತುರ್ತಾಗಿ ಕ್ರಮ ವಹಿಸಬೇಕು. ಅರಸೀಕೆರೆ ತಾಲ್ಲೂಕಿನ ಬೆಂಡೆಕೆರೆ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ-206 ಯೋಜನೆಗೆ ಸಂಬಂಧಿಸಿದಂತೆ ರೈತರ ಮನವೊಲಿಸಿ ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

» ನಾಲ್ಕನೇ ಪುಟದಲ್ಲಿ

# ಹಣಕಾಸಿನ ವಿಚಾರ : ವ್ಯಕ್ತಿ ಮೇಲೆ ಪೊಲೀಸ್ ಇನ್‌ಸ್ಪೆಕ್ಟರ್ ಹಲ್ಲೆ

• ಪ್ರಜೋದಯ ವರದಿ

**ಹಾಸನ:** ಹಣಕಾಸಿನ ವಿಚಾರಕ್ಕೆ ಬೆಂಗಳೂರಿನ ವಿವೇಕನಗರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಪರಿಚಿತ ವ್ಯಕ್ತಿ ಮೇಲೆ ಹಲ್ಲೆ ನಡೆಸಿರುವ ಬಗ್ಗೆ ಗೊರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ಕಾರ್ಲೆ ಕೊಪ್ಪಲು ಗ್ರಾಮದ ಶಶಿಧರ್ ಎಂಬುವವರ ಮೇಲೆ ಪೊಲೀಸ್ ಇನ್‌ಸ್ಪೆಕ್ಟರ್ ಶಿವಕುಮಾರ್ ಕಬ್ಬಿಣದ ರಾಡ್‌ನಿಂದ ಕಾಲು, ಕೈಗೆ ಹೊಡೆದು ಗಂಭೀರವಾಗಿ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದ್ದು, ಗಾಯಾಳು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಂಗಳವಾರ ಸಂಜೆ ಬೆಂಗಳೂರಿನಿಂದ ಕಾರಿನಲ್ಲಿ ಬಂದ ಶಿವಕುಮಾರ್ ಗೊರೂರು ಸಮೀಪದ ಉಳುವಾರೆ ಗ್ರಾಮದ ಬಳಿ ಶಶಿಧರ್ ಮೇಲೆ ದಾಳಿ ಮಾಡಿದ್ದಾರೆ. ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದ್ದು, ಬಲಕಣ್ಣಿಗೂ ಗಂಭೀರವಾಗಿ ಗಾಯವಾಗಿದೆ ಎಂದು ಶಶಿಧರ್ ಹಾಗು ಕುಟುಂಬ ಸದಸ್ಯರು ದೂರಿದ್ದಾರೆ.

ಏಳೆಂಟು ವರ್ಷಗಳ ಹಿಂದೆ ಹಾಸನದಲ್ಲಿಯೇ ಶಿವಕುಮಾರ್ ಇನ್ಸ್‌ಪೆಕ್ಟರ್ ಆಗಿದ್ದರು. ಶಿವಕುಮಾರ್ ಮತ್ತು ಶಶಿಧರ್ ನಡುವೆ ಹಣಕಾಸು ವ್ಯವ



ಹಾರವಿತ್ತು ಎನ್ನಲಾಗಿದೆ. ಶಶಿಧರ್ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಲು ಶಿವಕುಮಾರ್ ಹಣ ಕೊಟ್ಟಿದ್ದರು. ಭೂಮಿ ಖರೀದಿ ಹೊಂದಿಕೆ ಆಗದ ಹಿನ್ನಲೆ 20 ಲಕ್ಷ ರೂ. ಹಣವನ್ನು ಶಶಿಧರ್ ವಾಪಾಸ್ ಕೊಟ್ಟಿದ್ದರು. ಉಳಿದ 10 ಲ.ರೂ. ಹಣಕ್ಕಾಗಿ ಚೆಕ್ ಕೇಸ್ ಹಾಕಿದ್ದ ಶಿವಕುಮಾರ್, 10 ಲಕ್ಷ ಹಣದ ಬದಲು 26.5ರೂ. ಲಕ್ಷಕ್ಕೆ ಕೇಸ್ ಹಾಕಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಯುತ್ತಿದ್ದು, ಈ ನಡುವೆ ಶಿವಕುಮಾರ್ ಏಕಾಏಕಿ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ನನ್ನ ಕುಟುಂಬಕ್ಕೆ ಜೀವ ಭಯವಿದೆ ಎಂದು ಅಳಲು ತೋಡಿಕೊಂಡರು. ಈ ಸಂಬಂಧ ಗೊರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅರಸೀಕೆರೆ ಕ್ಷೇತ್ರ ಮರಳಿ ಪಡೆಯಲು ರೇವಣ್ಣಗೆ ಆಹ್ವಾನ

## ಶಿವಲಿಂಗೇಗೌಡಗೆ ಟಕ್ಕರ್ ನೀಡಲು ಯತ್ನ | ರಾಜಕೀಯ ಹಿಡಿತ ಸಾಧಿಸಲು ಕಾಂಗ್ರೆಸ್-ಜೆಡಿಎಸ್ ನಡುವೆ ಸಮರ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ರಾಜಕೀಯ ಹಿಡಿತ ಸಾಧಿಸಲು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಸಮರ ಶುರುವಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಅರಸೀಕೆರೆ ಕ್ಷೇತ್ರವನ್ನು ಕಸಿದುಕೊಂಡಿದ್ದ ಕಾಂಗ್ರೆಸ್‌ಗೆ ತಿರುಗೇಟು ನೀಡಲು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರನ್ನು ಅರಸೀಕೆರೆ ಕ್ಷೇತ್ರಕ್ಕೆ ಕರೆ ತರುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಕಳೆದ ಚುನಾವಣೆಯಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿ ಗೆದ್ದಿರುವ ಕೆ.ಎಂ. ಶಿವಲಿಂಗೇಗೌಡ ಅವರ ವಿರುದ್ಧ ಅರಸೀಕೆರೆ ಜೆಡಿಎಸ್ ಕಾರ್ಯಕರ್ತರಲ್ಲಿ ಅಸಮಾಧಾನ ಇದೆ. ಇತ್ತೀಚೆಗೆ ರೇವಣ್ಣ ಅವರನ್ನು ಭೇಟಿ ಮಾಡಿದ್ದ ಜೆಡಿಎಸ್ ಮುಖಂಡರ ನಿಯೋಗ, ಶಿವಲಿಂಗೇಗೌಡ ಅವರನ್ನು ಸೋಲಿಸಲು ನೀವೇ ಅರಸೀಕೆರೆಯಿಂದಲೇ ಸ್ಪರ್ಧಿಸಬೇಕೆಂದು ಒತ್ತಾಯಿಸಿದ್ದಾರೆ. ಸಕಾರಾತ್ಮಕವಾಗಿ ಸ್ಪಂದಿಸಿರುವ ರೇವಣ್ಣ, ನಾನೇ ಅಭ್ಯರ್ಥಿಯಾಗುತ್ತೇನೆ, ನೀವೆಲ್ಲರೂ ಒಟ್ಟಾಗಿ ಕೆಲಸ ಮಾಡಿ



### ಕ್ಷೇತ್ರ ತೊರೆದರೆ ಭವಾನಿ, ಸೂರಜ್‌ಗೆ ಅವಕಾಶ

ರೇವಣ್ಣ ಅವರು ತಮ್ಮ ರಾಜಕೀಯ ಜನ್ಮಸ್ಥಳ ಹೊಳೆನರಸೀಪುರ ಕ್ಷೇತ್ರವನ್ನು ಬಿಟ್ಟು ಬೇರೆ ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆ ಯೋಚಿಸುತ್ತಾರೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಹಾಗೇನಾದರೂ ರೇವಣ್ಣ ಅವರು ಅರಸೀಕೆರೆಗೆ ಹೋದರೆ, ಸ್ವಕ್ಷೇತ್ರ ಹೊಳೆನರಸೀಪುರದ ಮೇಲೆ ಹಿಡಿತ ಸಾಧಿಸಲು ರೇವಣ್ಣ ಅವರು ಪತ್ನಿ ಭವಾನಿ ರೇವಣ್ಣ ಅಥವಾ ಪುತ್ರ ಡಾ.ಸೂರಜ್ ರೇವಣ್ಣ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ. ಭವಾನಿ ಅವರಿಗೆ ಚುನಾವಣೆಗೆ ಸ್ಪರ್ಧಿಸುವ ಹಂಬಲ ಮೊದಲಿನಿಂದಲೂ ಇದ್ದು, ಸೂರಜ್ ಅವರ ಪರಿಷತ್ ಅವಧಿ ಕೂಡ ಮುಗಿಯುತ್ತಾ ಬಂದಿದೆ. ಈ ತಂತ್ರದ ಮೂಲಕ ಎರಡು ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ರಾಜಕೀಯ ಲೆಕ್ಕಾಚಾರವಾಗಿದೆ ಎಂಬ ಚರ್ಚೆ ನಡೆಯುತ್ತಿದೆ.

### ಜೆಡಿಎಸ್‌ಗೆ ವರವಾಗಲಿದೆಯೇ ಸಿಂಪತಿ

ಕಳೆದ ಎರಡು ವರ್ಷಗಳಿಂದ ರೇವಣ್ಣ ಕುಟುಂಬ ಕಾನೂನು ಹೋರಾಟ ಮತ್ತು ಕೇಸ್‌ಗಳ ಸುಳಿಗೆ ಸಿಲುಕಿ ಮುಜುಗರ ಅನುಭವಿಸಿದೆ. ಆದರೆ, ಈಗ ರೇವಣ್ಣ ಅವರ ಮೇಲಿನ ಕೇಸ್‌ಗಳು ಖುಲಾಸೆಯಾಗುತ್ತಿರುವುದು ಮತ್ತು ಕಾಂಗ್ರೆಸ್ ಸರ್ಕಾರದ ವಿರುದ್ಧ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಅಸಮಾಧಾನ ಜೆಡಿಎಸ್‌ಗೆ ಪ್ಲಸ್ ಪಾಯಿಂಟ್ ಆಗಬಹುದು.

ಕಾಂಗ್ರೆಸ್‌ನ ಟಾರ್ಗೆಟ್ ಹಾಸನ ತಂತ್ರವನ್ನು ಮುರಿಯಲು ದೇವೇಗೌಡರು ಮತ್ತೆ ಜಿಲ್ಲಾ ರಾಜಕಾರಣಕ್ಕೆ ಧುಮುಕುತ್ತಿರುವುದು ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ತಂದಿದೆ. ನಮ್ಮ ಕೆಟ್ಟ ದಿನಗಳು ಕಳೆದು ಒಳ್ಳೆಯ ದಿನಗಳು ಬರುತ್ತಿವೆ ಎಂಬ ರೇವಣ್ಣ ಅವರ ಮಾತು ಜಿಲ್ಲೆಯ ರಾಜಕೀಯದ ದಿಕ್ಸೂಚಿಯನ್ನು ಬದಲಿಸುವ ಮುನ್ಸೂಚನೆ ನೀಡಿದೆ.

ಎಂದು ಆಶ್ವಾಸನೆ ನೀಡಿದ್ದಾರೆ ಎನ್ನಲಾಗಿದೆ.

ಮೂರು ಬಾರಿ ಸತತವಾಗಿ ಜೆಡಿಎಸ್ ಶಾಸಕರನ್ನು ಆಯ್ಕೆ ಮಾಡಿದ್ದ ಅರಸೀಕೆರೆ ಕ್ಷೇತ್ರವನ್ನು ಮರಳಿ ಪಡೆದುಕೊಳ್ಳುವ ಉದ್ದೇಶದಿಂದ, ಅಲ್ಲಿನ ಜೆಡಿಎಸ್ ಮುಖಂಡರು ಹಾಗು ಕಾರ್ಯಕರ್ತರು ರೇವಣ್ಣ ಅವರನ್ನೇ ಅಖಾಡಕ್ಕಿಳಿಸುವಂತೆ ಒತ್ತಡ ಹೇರಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಹಾಸನ ಜಿಲ್ಲೆಯಲ್ಲಿ ಜೆಡಿಎಸ್ ಹೆಚ್ಚು ಸ್ಥಾನಗಳನ್ನು ಗೆಲ್ಲುವ ತಂತ್ರದ ಭಾಗವಾಗಿ, ಹೆಚ್.ಡಿ.ರೇವಣ್ಣ ಅವರು ಕ್ಷೇತ್ರ ಬದಲಾವಣೆ ಮಾಡುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ ಎಂಬ ಮಾತುಗಳು ಕೇಳಿ ಬರುತ್ತಿವೆ.

ಈ ಎಲ್ಲಾ ಬೆಳವಣಿಗೆಗಳ ನಡುವೆಯೇ ಜ.24 ರಂದು ಹಾಸನದಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಮಾಜಿ ಪ್ರಧಾನಿ ಹಾಗು ಪಕ್ಷದ ವರಿಷ್ಠ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಬೃಹತ್ ಸಮಾವೇಶ ಆಯೋಜಿಸಲು ತಯಾರಿ ನಡೆದಿದೆ.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗು ಕಾಂಗ್ರೆಸ್ ಪಕ್ಷ ಇತ್ತೀಚೆಗೆ ನಡೆಸಿರುವ ಬೃಹತ್ ಸಮಾವೇಶಗಳಿಗೆ ಟಕ್ಕರ್ ನೀಡಿ, ಪಕ್ಷವನ್ನು ಸಂಘಟಿಸುವ ಉದ್ದೇಶದಿಂದ ಈ ಸಮಾವೇಶಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ.

**ಶಿವಲಿಂಗೇಗೌಡ ಟಾರ್ಗೆಟ್**

ಜೆಡಿಎಸ್‌ನಿಂದಲೇ ಗೆದ್ದು ಶಾಸಕರಾಗಿದ್ದ ಶಿವಲಿಂಗೇಗೌಡರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ದಳಪತಿಗಳ ವಿರುದ್ಧ ತೊಡೆತಟ್ಟಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿ ಗೆಲುವು ಸಾಧಿಸಿದ್ದಾರೆ. ಪ್ರಸ್ತುತ ಕಾಂಗ್ರೆಸ್ ಸರ್ಕಾರದಲ್ಲಿ ಗೃಹ ಮಂಡಳಿ ಅಧ್ಯಕ್ಷರಾಗಿರುವ ಕೆ.ಎಂ. ಶಿವಲಿಂಗೇಗೌಡ ಅವರು ಮುಂಬರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದಾರೆ. ಅವರನ್ನು ಸೋಲಿಸುವುದೇ ಜೆಡಿಎಸ್ ಕಾರ್ಯಕರ್ತರ ಪ್ರಮುಖ ಗುರಿಯಾಗಿದ್ದು, ಅದಕ್ಕಾಗಿ ರೇವಣ್ಣ ಅವರನ್ನು ಅರಸೀಕೆರೆಯಲ್ಲಿ ಕಣಕ್ಕಿಳಿಸುವ ತಂತ್ರ ರೂಪಿಸಲಾಗುತ್ತಿದೆ ಎನ್ನಲಾಗಿದೆ.

# ಬೆಳೆಗಾರರಿಗೆ ಕಾಡಾನೆ, ಸರ್ಫೇಸಿ ಕಾಯ್ದೆ ಸಮಸ್ಯೆ

## ಪರಿಹಾರಕ್ಕಾಗಿ ದೆಹಲಿಗೆ ನಿಯೋಗ ತೆರಳಲು ಮಾಸಿಕ ಸಭೆಯಲ್ಲಿ ನಿರ್ಧಾರ

• ಪ್ರಜೋದಯ ವರದಿ

**ಸಕಲೇಶಪುರ:** ಕಾಡಾನೆ ಸಮಸ್ಯೆ, ಸರ್ಫೇಸಿ ಕಾಯ್ದೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕೇಂದ್ರ ಸರ್ಕಾರದ ಗಮನ ಸೆಳೆಯಲು ದೆಹಲಿಗೆ ನಿಯೋಗ ತೆರಳಲು ಕರ್ನಾಟಕ ಬೆಳೆಗಾರರ ಒಕ್ಕೂಟದ ಮಾಸಿಕ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ಹೆಚ್‌ಡಿಪಿಎ ಸಭಾಂಗಣದಲ್ಲಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾಫಿ ಬೆಳೆಗಾರರ ಸಮಸ್ಯೆಗಳ ಕುರಿತು ಚರ್ಚಿಸಿ, ದೆಹಲಿಗೆ ನಿಯೋಗ ತೆರಳಲು ನಿರ್ಧಾರ ಕೈಗೊಳ್ಳಲಾಯಿತು. ಹಳಸೆ ಶಿವಣ್ಣ ಅವರು ಮಾತನಾಡಿ, ಪ್ರಸ್ತುತ ಬೆಳೆಗಾರರು ಎದುರಿಸುತ್ತಿರುವ ಕಾಡಾನೆ ಸಮಸ್ಯೆ, ಸೆಕ್ಷನ್-4 ಇನ್ನಿತರ ಸಮಸ್ಯೆಗಳ ಬಗ್ಗೆ ಹೋರಾಟ ನಡೆಸಲು ನಾವುಗಳು ಸದಾ ಸಿದ್ಧರಿದ್ದೇವೆ. ಈಗಾಗಲೇ ಪ್ರಯತ್ನಗಳು



ನಡೆಯುತ್ತಿವೆ. ಕೇಂದ್ರ ಸರ್ಕಾರಕ್ಕೂ ಕೂಡ ಸಮಸ್ಯೆಗಳ ಬಗ್ಗೆ ಸಚಿವರ ಗಮನ ಸೆಳೆಯಲು ನಿರ್ಧರಿಸಿದ್ದೇವೆ. ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು.

ಪ್ಲಾಂಟರ್ಸ್ ಸಂಘದ ಗೌರವ ಕಾರ್ಯದರ್ಶಿ ಕೆ.ಬಿ.ಲೋಹಿತ್ ಅವರು ಮಾತನಾಡಿ, ಕೇಂದ್ರ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ವಿಶೇಷ ಸಲಹೆಗಾರರಾದ ಚೇತನ್ ಅವರು ಹೆತ್ತೂರಿಗೆ ಬಂದಾಗ ಅವರನ್ನು ಭೇಟಿ ಮಾಡಿ ಮಾನವ ವನ್ಯಜೀವಿ ಸಂಘರ್ಷಕ್ಕೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಚರ್ಚಿಸಿರುವುದರ ಬಗ್ಗೆ ತಿಳಿಸಿದರು. ಬಳಿಕ ಒಕ್ಕೂಟಕ್ಕೆ ಬಾಕಿ ನೀಡಬೇಕಾಗಿರುವ ಹಣವನ್ನು ಶೀಘ್ರದಲ್ಲೇ ಎಲ್ಲಾ ಹೋಬಳಿ, ತಾಲ್ಲೂಕು ಸಂಘಟನೆಗಳು ನೀಡಬೇಕಾಗಿಯೂ ಹಾಗು ಕಾಡಾನೆ ಸಮಸ್ಯೆ ಪರಿಹಾರಕ್ಕೆ ಪ್ರತಿ ಸಂಘಟನೆಯಿಂದ ತಲಾ 50 ಸಾವಿರ ರೂ. ನೀಡಬೇಕಾಗಿಯೂ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮಾಜಿ ಅಧ್ಯಕ್ಷ ಬಿ.ಎಸ್.ಜಯರಾಮ್ ಅವರು, ಅರಣ್ಯ ಭೂಮಿ, ಕಂದಾಯ ಭೂಮಿಯಲ್ಲಿನ ನ್ಯೂನತೆಗಳು ಹಾಗು ತಾಂತ್ರಿಕ ದೋಷಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಕೆ.ಬಿ.ಕೃಷ್ಣಪ್ಪ, ಅದ್ದೂರಿ ಕುಮಾರ್ ಅವರು ಕಾಡಾನೆ ಸಮಸ್ಯೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹಾಗು ಕಾನೂನಾತ್ಮಕವಾಗಿ ನಡೆಸುತ್ತಿರುವ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಸೋಮವಾರಪೇಟೆ ನಿರ್ದೇಶಕ ಮಲ್ಲಪ್ಪ ಅವರು ವಲಸೆ ಕಾರ್ಮಿಕರ ಸಮಸ್ಯೆ ಕುರಿತು ಗಮನ ಸೆಳೆದರು.

### ಕಟ್ಟಡದಿಂದ ಜಿಗಿದು ಯುವಕ ಆತ್ಮಹತ್ಯೆ

• ಪ್ರಜೋದಯ ವರದಿ



ಹಾಸನ: ಕಟ್ಟಡದಿಂದ ಜಿಗಿದು ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚನ್ನಪಟ್ಟಣ ಬಡಾವಣೆಯಲ್ಲಿ ನಡೆದಿದೆ. ಶ್ರೀನಿಧಿ (22) ಮೃತ.


ಅಂಚೆ ಇಲಾಖೆಯಲ್ಲಿ ನೌಕರನಾಗಿರುವ ನಾಗೇಂದ್ರ ಪ್ರಸಾದ್ ಹಾಗು ಸಾಹಿತಿ ಸೌಮ್ಯ ಪ್ರಸಾದ್ ಅವರ ಪುತ್ರನಾಗಿರುವ ಶ್ರೀನಿಧಿ, ನಗರದ ಖಾಸಗಿ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿ.ಕಾಂ. ಪದವಿ ವ್ಯಾಸಂಗ ಮಾಡುತ್ತಿದ್ದ. ಮಂಗಳವಾರ ಸ್ನೇಹಿತನ ಬಳಿ ಪುಸ್ತಕ ತೆಗೆದುಕೊಂಡು ಬರುವುದಾಗಿ ತಾಯಿಗೆ ತಿಳಿಸಿ ಮನೆಯಿಂದ ಹೊರ ಹೋಗಿದ್ದ. ನಂತರ ಚನ್ನಪಟ್ಟಣದಲ್ಲಿರುವ ಜಿಲ್ಲಾ ನ್ಯಾಯಾಲಯದ ಪಕ್ಕದ ಐದು ಅಂತಸ್ತಿನ ಕಟ್ಟಡದ ಮೇಲಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾನೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ನಗರ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಕಾಡಾನೆಗಳ ದಾಳಿ : ಬೆಳೆ, ಯಂತ್ರೋಪಕರಣಗಳ ನಾಶ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕಿನ ಅರೇಹಳ್ಳಿ ಹೋಬಳಿ ತೊಳಲು ಗ್ರಾಮದ ಮಧುಕರ್ ಎಂಬುವವರ ತೋಟದಲ್ಲಿ 15ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ದಾಳಿ ಮಾಡಿ ಕಾಫಿ, ಅಡಿಕೆ ಹಾಗು ಯಂತ್ರೋಪಕರಣಗಳನ್ನು ನಾಶ ಮಾಡಿವೆ.

ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿ ಮುಂದುವರೆದಿದ್ದು, ಕಾಫಿ, ಅಡಿಕೆ, ಬಾಳೆ ಗಿಡಗಳನ್ನು ತುಳಿದು ಹಾಳು ಮಾಡುತ್ತಿವೆ. ಕಾಫಿ ತೋಟಕ್ಕೆ ನೀರು ಹಾಯಿಸಲು ಜೋಡಿಸಿರುವ ಪೈಪ್, ಪಂಪ್‌ಸೆಟ್ ಇತರೆ ಉಪಕರಣಗಳನ್ನು ತುಳಿದು ಹಾಕುತ್ತಿವೆ. ತೋಟದ ರಕ್ಷಣೆಗಾಗಿ ಅಳವಡಿಸಿದ್ದ ಗೇಟ್‌ನ್ನು ಕಿತ್ತು ಬಿಸಾಡುತ್ತಿವೆ. ಅರೇಹಳ್ಳಿ, ಬಿಕ್ಕೋಡು ಭಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಡಾನೆಗಳು ಈಗ ಚೀಕನಹಳ್ಳಿ, ತೊಳಲು ಭಾಗಕ್ಕೂ



ಲಗ್ಗೆ ಹಾಕಿರುವುದರು ಬೆಳೆಗಾರರನ್ನು ಕಂಗೆಡಿಸಿದೆ.

ತೋಟದ ಮಾಲೀಕ ಮಧುಕರ್ ಅವರು ಮಾತನಾಡಿ, ಕಳೆದ ವರ್ಷ 200ಕ್ಕೂ ಹೆಚ್ಚು ಕಾಫಿ ಗಿಡಗಳನ್ನು ನೆಡಲಾಗಿತ್ತು. ಆನೆಗಳು ಅವುಗಳ ತುಳಿದು ಹಾಕಿವೆ. ಫಸಲಿಗೆ ಬಂದ ಕಾಫಿ, ಅಡಿಕೆ ಬೆಳೆಗಳನ್ನು ಹಾಳು ಮಾಡಿವೆ. ನೀರು ಹಾಯಿಸಲು ಹೊಸದಾಗಿ ಅಳವಡಿಸಿದ್ದ ಸ್ಪ್ರಿಂಕ್ಲರ್‌ಗಳನ್ನು ತುಳಿದು ಮುರಿದು ಹಾಕಿವೆ. ಕಾಡಾನೆಗಳಿಗೆ ಹೆದರಿ ಕಾರ್ಮಿಕರು ಕೆಲಸಕ್ಕೆ ಬರುತ್ತಿಲ್ಲ, ಈಗ ಕಾಫಿ ಹಣ್ಣು ಕೊಯ್ಲು ಸಮಯವಾಗಿದ್ದು, ಕಾರ್ಮಿಕರಿಲ್ಲದೆ ಪರದಾಡುವಂತಾಗಿದೆ. ಆನೆಗಳ ದಾಳಿಯಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಪರಿಹಾರ ದೊರಕಿಸಿಕೊಡಬೇಕೆಂದು ಆಗ್ರಹಿಸಿದ್ದಾರೆ.

ತಾಲ್ಲೂಕಿನ ಪಿಂಟೋ ಅವರ ತೋಟ ಕಣಗುಪ್ಪೆ, ಕಾನಹಳ್ಳಿ ಫಾರೆಸ್ಟ್ ಕಾನಹಳ್ಳಿ, ನಿಯರ್ ತಾರಾನಾಥ್ ಅವರ ತೋಟ ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ. ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು ಹೋಬಳಿ ವ್ಯಾಪ್ತಿಯಲ್ಲೂ ಕಾಡಾನೆಗಳ ಸಂಚಾರ ಕಂಡು ಬಂದಿದೆ.

# ಮೆಕ್ಕೆಜೋಳ ವಹಿವಾಟು ವ್ಯತ್ಯಾಸ ಮೊತ್ತ ಪಾವತಿ ಕ್ರಮಕ್ಕೆ ಡಿ.ಸಿ.ಸೂಚನೆ

• ಪ್ರಜೋದಯ ವರದಿ

**ಹಾಸನ :** ಮೆಕ್ಕೆಜೋಳ ವಹಿವಾಟಿನ ಆಧಾರದ ಮೇಲೆ ರೈತರಿಗೆ ವ್ಯತ್ಯಾಸದ ಮೊತ್ತ ಪಾವತಿಗಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನೋಂದಣಿ ಕೇಂದ್ರ ಸ್ಥಾಪನೆಗೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮೆಕ್ಕೆಜೋಳದ ಧಾರಣೆಗೆ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಆಗುವ ವಹಿವಾಟಿನ ಆಧಾರದ ಮೇಲೆ ರೈತರಿಗೆ ವ್ಯತ್ಯಾಸದ ಮೊತ್ತವನ್ನು ಪಾವತಿಸುವ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರದ ಆದೇಶದಂತೆ ಕ್ವಿಂಟಾಲ್‌ಗೆ 2150 ರೂಪಾಯಿಗಿಂತ ಕಡಿಮೆ ದರದಲ್ಲಿ ಮಾರಾಟವಾದಲ್ಲಿ ವ್ಯತ್ಯಾಸದ ಮೊತ್ತ ಪಾವತಿಯ ವೇಳೆಯಲ್ಲಿ ಲೋಪವಾಗದಂತೆ ಕ್ರಮ ಕೈ ಗೊಳ್ಳಬೇಕು. ಕೃಷಿ ಇಲಾಖೆಯಿಂದ ಗುಣಮಟ್ಟ ಪರಿಶೀಲನೆಗೆ ತಾಂತ್ರಿಕ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದರು.

ಜಿಲ್ಲೆಗೆ ನಿಗದಿ ಪಡಿಸಿರುವ ಮೆಕ್ಕೆಜೋಳದ ನೋಂದಣಿ ಕಾರ್ಯವನ್ನು ಬಯೋಮೆಟ್ರಿಕ್ ಆಧಾರಿತವಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಸಂಸ್ಥೆಯು ನಿರ್ವಹಿಸಬೇಕು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯು ಯುಎಂಪಿ ತಂತ್ರಾಂಶದಲ್ಲಿ ದಾಖಲಾಗಿರುವ ನೋಂದಾಯಿತ ರೈತರ ಮಾರಾಟದ ದೃಢೀಕೃತ ಮಾಹಿತಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದವರು ಪರಿಶೀಲಿಸಿ ಡಿ.ಬಿ.ಟಿ. ಮೂಲಕ ವ್ಯತ್ಯಾಸದ ಮೊತ್ತವನ್ನು ರೈತರಿಗೆ ಪಾವತಿಸಲು ತಿಳಿಸಿದರು.

ಸಭೆಯಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿದ್ದರು.

## 5ನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕರ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶ್ರವಣಬೆಳಗೊಳ ಶ್ರೀ

# ಸಂಸ್ಕೃತಿ, ಪರಂಪರೆ ರಕ್ಷಣೆ ಮಾಡುವಲ್ಲಿ ಪುರೋಹಿತರ ಪಾತ್ರ ಮುಖ್ಯ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ವಿದ್ವಾಂಸರು, ಅರ್ಚಕರು, ಪುರೋಹಿತರು ಸರ್ವತ್ರ ಪೂಜಿತರಾಗಿರುತ್ತಾರೆ. ಪುರೋಹಿತರಿಗೆ ಸಮಾಜದಲ್ಲಿ ವಿಶೇಷವಾದ ಗೌರವ ಸ್ಥಾನ ನೀಡಲಾಗುತ್ತದೆ. ನಮ್ಮ ಪುರಾತನ ದೇವಾಲಯಗಳು, ಸಂಸ್ಕೃತಿ, ಪರಂಪರೆಯನ್ನು ರಕ್ಷಣೆ ಮಾಡುವಲ್ಲಿ ಪುರೋಹಿತರ ಪಾತ್ರ ಬಹಳ ಮುಖ್ಯವಾಗಿದ್ದು, ಅವರಿಗೆ ಸಹಕಾರ ನೀಡುವುದು ಶ್ರಾವಕರ ಜವಾಬ್ದಾರಿಯಾಗಿದೆ ಎಂದು ಸ್ವಸ್ತಿ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ವರ್ಯ ಭಟ್ಟಾರಕ ಮಹಾಸ್ವಾಮೀಜಿ ಹೇಳಿದರು.

ಬುಧವಾರ ಶ್ರವಣಬೆಳಗೊಳದ ಭಂಡಾರಿ ಬಸದಿಯ ಆವರಣದಲ್ಲಿ ನಡೆಯುತ್ತಿರುವ 5ನೇ ದಕ್ಷಿಣ ಭಾರತ



ದಿಗಂಬರ ಜೈನ ಅರ್ಚಕರ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಪುರದ ಹಿತವನ್ನು ಬಯಸುವವರು, ಶ್ರಾವಕ-ಶ್ರಾವಕಿಯರಿಗೆ, ಸಮಾಜಕ್ಕೆ ಮಾರ್ಗದರ್ಶಕರು. ಎಲ್ಲಾ ಜೀವಿಗಳ ಕಷ್ಟಕ್ಕೆ ಪರಿಹಾರ ಒದಗಿಸುವವರಾಗಿದ್ದಾರೆ. ಪೌರೋಹಿತ್ಯ ಎನ್ನುವುದು ಕೇವಲ ಒಂದು ವೃತ್ತಿಯಲ್ಲ. ಸಮಾಜದ ಹಿತವನ್ನು ಬಯಸುವ ಶ್ರೇಷ್ಠವಾದ ಸ್ಥಾನವೆಂದು ಬಣ್ಣಿಸಿದರು.

ಶ್ರವಣಬೆಳಗೊಳ ತ್ಯಾಗದ ಭೂಮಿಯಾಗಿದ್ದು, ಇಲ್ಲಿ ಹಿಂದಿನಿಂದಲೂ ಶಾಸ್ತ್ರಿ ಪರಂಪರೆ ಭವ್ಯವಾಗಿತ್ತು. ಅಂದಿನಿಂದಲೂ ಶಾಸ್ತ್ರಿಗಳಿಗೆ, ವಿದ್ವಾಂಸರಿಗೆ ಗೌರವ ಸತ್ಕಾರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ದಕ್ಷಿಣ ಭಾರತದಲ್ಲಿ ಶ್ರವಣಬೆಳಗೊಳ ಜೈನ ಧರ್ಮಿಯರ ಕೇಂದ್ರಬಿಂದುವಾಗಿತ್ತು. ಎಲ್ಲಾ ಶಾಸ್ತ್ರಿಗಳಿಗೆ, ವಿದ್ವಾಂಸರಿಗೆ ಜ್ಞಾನದ ಕೇಂದ್ರಸ್ಥಾನವಾಗಿತ್ತು. ನಮ್ಮ ಹಿಂದಿನ ಗುರುಗಳಾದ ಕರ್ಮಯೋಗಿ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ವಿದ್ವಾಂಸರಿಗೆ, ಪುರೋಹಿತರಿಗೆ ಮಹತ್ವದ ಸ್ಥಾನಮಾನ ನೀಡಿ, ಪ್ರೋತ್ಸಾಹ ನೀಡುತ್ತಿದ್ದರು ಎಂದರು.

ಪುರೋಹಿತರು ಬೇಡುವಂತವರಾಗಬಾರದು, ದಾನ ನೀಡುವಂತರಾಗಬೇಕು. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸುಭದ್ರರಾಗಬೇಕು. ಎಲ್ಲರೂ ಸಂಘಟಿತರಾಗಿ ಸಮಸ್ಯೆಗಳಿಗೆ ಒಗ್ಗಟ್ಟಿನಿಂದ ಪರಿಹಾರ ಕಂಡುಕೊಳ್ಳಬೇಕು. ನಮಗಿರುವ ಅವಕಾಶಗಳನ್ನು ಬಳಸಿಕೊಂಡು ಉನ್ನತ ಮಟ್ಟಕ್ಕೆ ಏರಬೇಕು. ನಮ್ಮಲ್ಲಿ ಕಲಿಯುವ ಹಂಬಲ ಇರಬೇಕು. ಆಗ ಮಾತ್ರ ಹೆಚ್ಚು ಜ್ಞಾನಿಗಳಾಗಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಶಾರೀರಿಕ ಆರೋಗ್ಯ, ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಉತ್ತಮ ವಸ್ತ್ರ ಸಂಹಿತೆ ರೂಢಿಸಿಕೊಳ್ಳಬೇಕು. ಧಾರ್ಮಿಕವಾಗಿ ಜ್ಞಾನವನ್ನು ವೃದ್ಧಿಸಿಕೊಂಡಾಗ ಸಮಾಜದಲ್ಲಿ ಉನ್ನತ ಸ್ಥಾನ ದೊರೆಯುತ್ತದೆ. ಪುರೋಹಿತರು ಸಮಾಜದ ಆಸ್ತಿ ಇದ್ದಂತೆ. ಪತಿನಿತ್ಯ ಸಮಾಜಕ್ಕೆ ಮಾರ್ಗದರ್ಶನ ನೀಡಿ ಧರ್ಮ ಜಾಗೃತಿ ಮೂಡಿಸಬೇಕು. ನಮ್ಮ ನಡೆ- ನುಡಿಗಳು ಸಮಾಜಕ್ಕೆ ಆದರ್ಶ ಪ್ರಾಯವಾಗಿರಬೇಕು. ಸಾಮೂಹಿಕ ಕಾರ್ಯಕ್ರಮಗಳಲ್ಲಿ ಕಂದಮೂಲ ಆಹಾರಗಳನ್ನು ತ್ಯಜಿಸುವಂತೆ ಶ್ರಾವಕರಿಗೆ ಅರಿವು ಮೂಡಿಸಬೇಕೆಂದರು.

» ನಾಲ್ಕನೇ ಪುಟದಲ್ಲಿ

### ಪತಿಯಿಂದ ಕೊಲೆಗೆ ಯತ್ನ: ಅಸ್ವಸ್ಥಗೊಂಡಿದ್ದ ಪತ್ನಿ ಸಾವು

• ಪ್ರಜೋದಯ ವರದಿ

**ಹಾಸನ:** ಪತಿಯೇ ಪತ್ನಿಗೆ ನೇಣು ಬಿಗಿದು ಕೊಲೆ ಮಾಡಲು ಯತ್ನಿಸಿದ್ದ ವೇಳೆ ತೀವ್ರ ಅಸ್ವಸ್ಥಗೊಂಡು ನಗರದ ಹಿಮ್ಸ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಹಿಳೆ ಸಾವನ್ನಪ್ಪಿದ್ದಾರೆ.

ಮೂಲತಃ ತುಮಕೂರು ಜಿಲ್ಲೆ ತಿಪಟೂರಿನ ರೂಹಿನಾ (28) ಮೃತೆ. 10 ವರ್ಷಗಳ ಹಿಂದೆ ರೂಹಿನಾ ಹಾಗು ತುಮಕೂರು ಜಿಲ್ಲೆ ಕುನ್ನಾಲ್ ಗ್ರಾಮದ ಚಾಂದ್‌ಪಾಷ ಮದುವೆ ಆಗಿದ್ದರು. ಮದುವೆ ಬಳಿಕ ತಿಪಟೂರಿನ ಶಾಂತಿನಗರದಲ್ಲಿ ದಂಪತಿ ವಾಸವಾಗಿದ್ದರು. ಹಣ ತರುವಂತೆ ಆಗಾಗ ಪತ್ನಿಗೆ ಕಿರುಕುಳ ನೀಡುತ್ತಿದ್ದ. ಕಳೆದ ಡಿ.31 ರಂದು ಕುಡಿದು ಬಂದು ಪತ್ನಿ ಕುತ್ತಿಗೆ ಬಿಗಿದು ಕೊಲ್ಲಲು ಪ್ರಯತ್ನ ಮಾಡಿದ್ದ. ಮಹಿಳೆಯನ್ನು ಡಿ.31 ರಂದು ಹಿಮ್ಸ್‌ಗೆ ಪೋಷಕರು ದಾಖಲು ಮಾಡಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

# ಸಿದ್ದರಾಮಯ್ಯ ರಾಜಕೀಯ ಚಿಂತನೆಯ ಹೃದಯಭಾಗವೇ ಸಾಮಾಜಿಕ ನ್ಯಾಯ

- ದೇವರಾಜ ಅರಸು ಅವರು ತಮ್ಮ ಕಾಲದಲ್ಲಿ ಹೊಸ ರಾಜಕೀಯ ಭಾಷೆಯನ್ನು ಕಟ್ಟಿ ಕೊಟ್ಟರು. ಸಿದ್ದರಾಮಯ್ಯ ಅವರು ಅದೇ ಭಾಷೆಯನ್ನು ಇಂದಿನ ಸವಾಲಿನ ಕಾಲಘಟ್ಟದಲ್ಲಿ ಜೀವಂತವಾಗಿಟ್ಟಿದ್ದಾರೆ. ಬಹುಧ್ರುವೀಯ ರಾಜಕಾರಣ, ತೀವ್ರ ಮಾಧ್ಯಮ ಗಮನ ಮತ್ತು ವೇಗದ ಸಾರ್ವಜನಿಕ ಅಭಿಪ್ರಾಯದ ನಡುವೆ ಸಹ ಮೌಲ್ಯಗಳನ್ನು ಹಿಡಿದು ಕೊಂಡು ನಡೆಯುವುದು ಸುಲಭದ ಕೆಲಸವಲ್ಲ
- ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಮುಂತಾದ ಯೋಜನೆಗಳು ಕೇವಲ ಸರ್ಕಾರಿ ಯೋಜನೆಗಳಲ್ಲ; ಅವು ರಾಜ್ಯವು ತನ್ನ ನಾಗರಿಕರ ಬಗ್ಗೆ ಹೊಂದಿರುವ ನೈತಿಕ ಹೊಣೆಗಾರಿಕೆಯ ಪ್ರತಿಬಿಂಬ. ಹಸಿವು, ಅಪೌಷ್ಟಿಕತೆ, ಶಿಕ್ಷಣದಿಂದ ವಂಚನೆ - ಇವುಗಳನ್ನು ಸಾಮಾಜಿಕ ಅನ್ಯಾಯಗಳೆಂದು ಗುರುತಿಸಿ, ಅವುಗಳ ವಿರುದ್ಧ ರಾಜ್ಯವೇ ನಿಂತು ಹೋರಾಡಬೇಕು ಎಂಬ ದೃಷ್ಟಿಕೋನವೇ ಮೌಲ್ಯಾಧಾರಿತ ರಾಜಕಾರಣ.



ಸಿದ್ಧಹಸ್ತ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕೆಲವೇ ನಾಯಕರು ತಮ್ಮ ಆಡಳಿತಾವಧಿಗಿಂತಲೂ ಹೆಚ್ಚಿನ ಅರ್ಥವನ್ನು ಸಮಾಜಕ್ಕೆ ನೀಡಿದ್ದಾರೆ. ದೇವರಾಜ ಅರಸು ಅವರು ಆ ಪಂಕ್ತಿಯಲ್ಲಿನ ಶಾಶ್ವತ ಹೆಸರು. ಅವರ ಆಡಳಿತವು ಕೇವಲ ಅಧಿಕಾರದ ನಿರ್ವಹಣೆಯಲ್ಲ, ಅದು ಸಾಮಾಜಿಕ ನ್ಯಾಯದ ಮಹಾ ಚಳವಳಿಯಾಗಿತ್ತು.

ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರನ್ನು ರಾಜಕೀಯದ ಕೇಂದ್ರವಾಹಿನಿಗೆ ತರುವ ಮೂಲಕ ಅವರು ರಾಜ್ಯದ ರಾಜಕೀಯ ದಿಕ್ಕನ್ನೇ ಬದಲಿಸಿದರು. ಇದೀಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಸು ಅವರ ದಾಖಲೆಯನ್ನು ಮುರಿಯುವ ಹಂತಕ್ಕೆ ತಲುಪುತ್ತಿರುವ ಈ ಐತಿಹಾಸಿಕ ಕ್ಷಣದಲ್ಲಿ, ಕರ್ನಾಟಕದ ರಾಜಕೀಯ ಮತ್ತೊಮ್ಮೆ ಮೌಲ್ಯಾಧಾರಿತ ನಾಯಕತ್ವದ ಮಹತ್ವವನ್ನು ಸ್ಮರಿಸಿಕೊಳ್ಳುತ್ತಿದೆ.

ಸಿದ್ದರಾಮಯ್ಯ ಅವರ ರಾಜಕೀಯ ಬದುಕನ್ನು ಅವಲೋಕಿಸಿದರೆ, ಅವರು ಅಧಿಕಾರಕ್ಕಾಗಿ ರಾಜಕೀಯ ಮಾಡಿರುವ ನಾಯಕನಲ್ಲ; ಮೌಲ್ಯಗಳಿಗಾಗಿ ರಾಜಕೀಯವನ್ನು ಅರ್ಥ ಮಾಡಿ ಕೊಂಡ ನಾಯಕ. ಅವರ ರಾಜಕೀಯ ಚಿಂತನೆಯ ಹೃದಯಭಾಗದಲ್ಲಿರುವುದು ಸಾಮಾಜಿಕ ನ್ಯಾಯ, ಅಹಿಂದ ಎಂಬ ಪರಿಕಲ್ಪನೆಯನ್ನು ಅವರು ಕೇವಲ ಚುನಾವಣಾ ಘೋಷಣೆಯಾಗಿ ಅಲ್ಲ, ಒಂದು ಸಾಮಾಜಿಕ-ರಾಜಕೀಯ ತತ್ವವಾಗಿ ರೂಪಿಸಿದರು.

ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರ ಒಕ್ಕೂಟದ ಮೂಲಕ ಸಮಾನ ಅವಕಾಶಗಳ ಸಮಾಜ ನಿರ್ಮಾಣ ಮಾಡುವ ಕನಸು, ದೇವರಾಜ ಅರಸು ಅವರ ಸಾಮಾಜಿಕ ಕ್ರಾಂತಿಯ ಮುಂದುವರಿಕೆಯಂತೆ ಕಾಣುತ್ತದೆ.

ದೇವರಾಜ ಅರಸು ಅವರು ತಮ್ಮ ಕಾಲದಲ್ಲಿ ಸಮಾಜದ ದಮನಿತ ವರ್ಗಗಳಿಗೆ ಗೌರವ, ಹಕ್ಕು ಮತ್ತು ಆತ್ಮವಿಶ್ವಾಸ ನೀಡಿದಂತೆ, ಸಿದ್ದರಾಮಯ್ಯ ಅವರು ಇಂದಿನ ಕಾಲಘಟ್ಟದಲ್ಲಿ ಅದೇ ವರ್ಗಗಳ ಬದುಕಿಗೆ ಭದ್ರತೆಯನ್ನು ಒದಗಿಸುವ ಆಡಳಿತ ಮಾದರಿಯನ್ನು ಕಟ್ಟಿದರು.

ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಮುಂತಾದ ಯೋಜನೆಗಳು ಕೇವಲ ಸರ್ಕಾರಿ ಯೋಜನೆಗಳಲ್ಲ; ಅವು ರಾಜ್ಯವು ತನ್ನ ನಾಗರಿಕರ ಬಗ್ಗೆ ಹೊಂದಿರುವ ನೈತಿಕ ಹೊಣೆಗಾರಿಕೆಯ ಪ್ರತಿಬಿಂಬ. ಹಸಿವು, ಅಪೌಷ್ಟಿಕತೆ, ಶಿಕ್ಷಣದಿಂದ ವಂಚನೆ - ಇವುಗಳನ್ನು ಸಾಮಾಜಿಕ ಅನ್ಯಾಯಗಳೆಂದು ಗುರುತಿಸಿ, ಅವುಗಳ ವಿರುದ್ಧ ರಾಜ್ಯವೇ ನಿಂತು ಹೋರಾಡಬೇಕು ಎಂಬ ದೃಷ್ಟಿಕೋನವೇ ಮೌಲ್ಯಾಧಾರಿತ ರಾಜಕಾರಣ.

ಸಿದ್ದರಾಮಯ್ಯ ಅವರ ಆಡಳಿತದ ಮತ್ತೊಂದು ಪ್ರಮುಖ ಲಕ್ಷಣ ಅವರ ಧರ್ಮನಿರಪೇಕ್ಷ ನಿಲುವು. ಭಾರತದ ಸಂವಿಧಾನದಲ್ಲಿ ಅಡಕವಾಗಿರುವ ಸಮಾನತೆ, ಸಹಬಾಳ್ವೆ ಮತ್ತು ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಅವರು ರಾಜಕೀಯದ ಕೇಂದ್ರಬಿಂದುಗಾಗಿಟ್ಟಿದ್ದಾರೆ.

ಧರ್ಮ, ಜಾತಿ ಅಥವಾ ಭಾಷೆಯ ಆಧಾರದ ಮೇಲೆ ವಿಭಜನೆ ಮಾಡುವ ರಾಜಕಾರಣಕ್ಕೆ ವಿರುದ್ಧವಾಗಿ, ಎಲ್ಲರನ್ನು ಒಳಗೊಂಡ ಸಮಾಜ ನಿರ್ಮಾಣದ ಪರವಾಗಿ ಅವರು ನಿಂತಿದ್ದಾರೆ. ಇದು ಅವರನ್ನು ಸಮಕಾಲೀನ ರಾಜಕಾರಣದಲ್ಲಿ ವಿಭಿನ್ನವಾಗಿಸುವ ಅಂಶ.

ದೇವರಾಜ ಅರಸು ಮತ್ತು ಸಿದ್ದರಾಮಯ್ಯ ಅವರನ್ನು ಸಂಪರ್ಕಿಸುವ ಮತ್ತೊಂದು ಪ್ರಮುಖ ಸೇತುವೆ ಎಂದರೆ ಆಡಳಿತವನ್ನು ಜನಸಾಮಾನ್ಯರ ಬದುಕಿನೊಂದಿಗೆ ನೇರವಾಗಿ ಜೋಡಿಸುವ ದೃಷ್ಟಿ, ಅರಸು ಅವರು ಭೂಸುಧಾರಣೆ ಮತ್ತು ಮೀಸಲಾತಿ ಮೂಲಕ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ರಚನೆಯನ್ನು ಬದಲಿಸಿದರೆ, ಸಿದ್ದರಾಮಯ್ಯ ಅವರು ಕಲ್ಯಾಣರಾಜ್ಯ ಪರಿಕಲ್ಪನೆಯನ್ನು ಬಲಪಡಿಸುವ ಮೂಲಕ ಜನಸಾಮಾನ್ಯರ ದೈನಂದಿನ ಬದುಕಿಗೆ ಸರ್ಕಾರವನ್ನು ಹತ್ತಿರ ತಂದರು.

ಬಡವನ ಮನೆಗೆ ಸರ್ಕಾರ ತಲುಪಬೇಕು ಎಂಬ ಆಲೋಚನೆಯೇ ಇವರಿಬ್ಬರ ರಾಜಕಾರಣದ ಮೂಲಸಾರ. ಸಿದ್ದರಾಮಯ್ಯ ಅವರ ಆಡಳಿತಾವಧಿ ದೀರ್ಘವಾಗುತ್ತಿರುವುದು ಕೇವಲ ರಾಜಕೀಯ ಸಾಧನೆ ಅಲ್ಲ; ಅದು ಜನಸಾಮಾನ್ಯರ ನಂಬಿಕೆಯ ಪ್ರತಿಫಲ, ಮೌಲ್ಯಾಧಾರಿತ ರಾಜಕಾರಣ ಎಂದರೆ ತಕ್ಷಣದ ಲಾಭಕ್ಕಿಂತ ದೀರ್ಘಕಾಲೀನ ಸಾಮಾಜಿಕ ಹಿತವನ್ನು ಗಮನಿಸುವುದು.

ಈ ಅರ್ಥದಲ್ಲಿ, ಸಿದ್ದರಾಮಯ್ಯ ಅವರು ಜನಪರ ನೀತಿಗಳ ಮೂಲಕ ಸಮಾಜದ ಅಸಮಾನತೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದಾರೆ.



ಇದರಿಂದ ಅವರು ಕೇವಲ ಮುಖ್ಯಮಂತ್ರಿ ಅಲ್ಲ, ಸಾಮಾಜಿಕ ನ್ಯಾಯದ ಧ್ವಜವಾಹಕರಾಗಿದ್ದಾರೆ.

ದೇವರಾಜ ಅರಸು ಅವರು ತಮ್ಮ ಕಾಲದಲ್ಲಿ ಹೊಸ ರಾಜಕೀಯ ಭಾಷೆಯನ್ನು ಕಟ್ಟಿ ಕೊಟ್ಟರು. ಸಿದ್ದರಾಮಯ್ಯ ಅವರು ಅದೇ ಭಾಷೆಯನ್ನು ಇಂದಿನ ಸವಾಲಿನ ಕಾಲಘಟ್ಟದಲ್ಲಿ ಜೀವಂತವಾಗಿಟ್ಟಿದ್ದಾರೆ. ಬಹುಧ್ರುವೀಯ ರಾಜಕಾರಣ, ತೀವ್ರ ಮಾಧ್ಯಮ ಗಮನ ಮತ್ತು ವೇಗದ ಸಾರ್ವಜನಿಕ ಅಭಿಪ್ರಾಯದ ನಡುವೆ ಸಹ ಮೌಲ್ಯಗಳನ್ನು ಹಿಡಿದು ಕೊಂಡು ನಡೆಯುವುದು ಸುಲಭದ ಕೆಲಸವಲ್ಲ. ಆದರೆ ಸಿದ್ದರಾಮಯ್ಯ ಅವರು ಆ ಸವಾಲನ್ನು ಸಮರ್ಥವಾಗಿ ಎದುರಿಸಿದ್ದಾರೆ.

ಇಂದು ಅವರು ದೇವರಾಜ ಅರಸು ಅವರ ಆಡಳಿತದ ದಾಖಲೆಯನ್ನು ಮುರಿಯುತ್ತಿರುವುದು ಒಂದು ಸಂಖ್ಯಾತ್ಮಕ ಸಾಧನೆಯಷ್ಟೇ ಅಲ್ಲ; ಅದು ಒಂದು ತತ್ವದ ಗೆಲುವು. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಗೌರವ ಎಂಬ ಮೌಲ್ಯಗಳು ರಾಜಕೀಯದಲ್ಲಿ ಇನ್ನೂ ಪ್ರಸ್ತುತವಾಗಿವೆ ಎಂಬುದಕ್ಕೆ ಇದು ಸಾಕ್ಷಿ.

ಅರಸು ಅವರು ಬಿತ್ತಿದ ಬೀಜ ಇಂದಿಗೂ ಫಲ ಕೊಡುತ್ತಿದೆ ಎಂಬುದನ್ನು ಸಿದ್ದರಾಮಯ್ಯ ಅವರ ರಾಜಕೀಯ ಜೀವನ ತೋರಿಸುತ್ತದೆ. ಅಂತಿಮವಾಗಿ, ಸಿದ್ದರಾಮಯ್ಯ ಅವರನ್ನು ದೇವರಾಜ ಅರಸು ಅವರ ರಾಜಕೀಯ ಪರಂಪರೆಯ ಮುಂದುವರಿದ ಅಧ್ಯಾಯವೆಂದು ಹೇಳಬಹುದು. ಅವರು ಆ ಪರಂಪರೆಯನ್ನು ನಕಲಿಸಿಲ್ಲ; ಕಾಲಕ್ಕೆ ತಕ್ಕಂತೆ ರೂಪಾಂತರಗೊಳಿಸಿದ್ದಾರೆ.

ಮೌಲ್ಯಗಳನ್ನು ಕೇಂದ್ರದಲ್ಲಿಟ್ಟುಕೊಂಡ ರಾಜಕಾರಣ ಇನ್ನೂ ಸಾಧ್ಯ, ಇನ್ನೂ ಅಗತ್ಯ ಎಂಬ ಸಂದೇಶವನ್ನು ಅವರು ಕರ್ನಾಟಕದ ರಾಜಕೀಯಕ್ಕೆ ನೀಡಿದ್ದಾರೆ. ಇದೇ ಅವರ ಅತಿದೊಡ್ಡ ಸಾಧನೆ ಮತ್ತು ಇದೇ ಕಾರಣಕ್ಕೆ ಅವರು ಮೌಲ್ಯಾಧಾರಿತ ರಾಜಕಾರಣದ ಜೀವಂತ ಪ್ರತಿನಿಧಿಯಾಗಿ ಇತಿಹಾಸದಲ್ಲಿ ಸ್ಥಾನಪಡೆಯುತ್ತಾರೆ. ಇದೆಲ್ಲದರ ಮಧ್ಯೆಯೂ ಸಿದ್ದರಾಮಯ್ಯ ಹಾಗೂ ಅರಸು ತುಲನೆ ಸರಿಯೇ? ಅರಸು ಅವರಂಥಹ ಶಾಶ್ವತ ಯೋಜನೆ ಹಾಗೂ ರಾಜಕೀಯ ನಿಲುವುಗಳನ್ನು ಸಿದ್ದರಾಮಯ್ಯ ಪ್ರದರ್ಶಿಸಿದ್ದಾರೆಯೇ? ಎಂಬ ಪ್ರಶ್ನೆಗಳನ್ನೂ ಕೆಲವರು ಎತ್ತಿದ್ದಾರೆ.

ದೇವರಾಜ ಅರಸು ಅವರು ಉಳುವವನೇ ಹೊಲದೊಡೆಯ ಎಂಬ ನೀತಿಯನ್ನು ಜಾರಿಗೆ ತಂದರು. ಅದು ಬಡವರ ಪಾಲಿಗೆ ಶಾಶ್ವತ ಯೋಜನೆಯಾಯ್ತು. ಆದರೆ ಸಿದ್ದರಾಮಯ್ಯ ಆಡಳಿತದಲ್ಲಿ ಇಂಥ ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆಯೇ? ಎಂಬ ದೊಡ್ಡ ಪ್ರಶ್ನೆ ಮುಂದಿದೆ.

ಆದರೆ ಅನ್ನಭಾಗ್ಯದಂಥ ಕಲ್ಯಾಣ ಯೋಜನೆಗಳು ಹಾಗೂ ಪಂಚ ಗ್ಯಾರಂಟಿಗಳು ಕೂಡಾ ಶಾಶ್ವತವಾದ ಯೋಜನೆಗಳಾಗಿವೆ. ಸಿದ್ದರಾಮಯ್ಯನವರು ಮೊದಲ ಅವಧಿಯ ಜಾರಿಗೆ ತಂದ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಕಾಯ್ದೆಯನ್ನು ಶಾಶ್ವತ ನಿರ್ಧಾರಗಳಲ್ಲ ಎಂದು ಬದಿಗೆ ಸರಿಸಲು ಸಾಧ್ಯವೇ? ಈ ಯೋಜನೆಯಿಂದಾಗಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಯೋಜನೆಯಲ್ಲಿ ಪಾಲು ಪಡೆಯಲು ಸಾಧ್ಯವಾಗಿದೆ. ಈ ಕಾರಣಕ್ಕಾಗಿ ಶೋಷಿತ ಸಮುದಾಯ ಶಾಶ್ವತವಾಗಿ ಸಿದ್ದರಾಮಯ್ಯ ಅವರನ್ನು ಸ್ಮರಿಸಿಕೊಳ್ಳಲೇಬೇಕು.

ಅರಸು ಹಾಗೂ ರಾಮಕೃಷ್ಣ ಹೆಗಡೆಯವರ ರೀತಿ ಸಿದ್ದರಾಮಯ್ಯ ಮೌಲ್ಯಾಧಾರಿತ ಪರಂಪರೆಯನ್ನು ಮುಂದುವರಿಸಲು ಹೊಸ ನಾಯಕತ್ವವನ್ನು ಸೃಷ್ಟಿಸಲಿಲ್ಲ ಎಂಬುದು ಇನ್ನೊಂದು ವಾದ. ಈ ಮಾತು ತಕ್ಕಮಟ್ಟಿಗೆ ನಿಜ ಎನಿಸಿದರೂ ರಾಜಕಾರಣದ ಕಾಲ ಘಟ್ಟವೂ ಕೂಡಾ ಮಹತ್ವ ಪಡೆದುಕೊಳ್ಳುತ್ತದೆ.

## ಸಮಾಜದ ಅಸಮಾನತೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದಾರೆ.

- ಈ ಅರ್ಥದಲ್ಲಿ, ಸಿದ್ದರಾಮಯ್ಯ ಅವರು ಜನಪರ ನೀತಿಗಳ ಮೂಲಕ ಸಮಾಜದ ಅಸಮಾನತೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದಾರೆ.
- ಇದರಿಂದ ಅವರು ಕೇವಲ ಮುಖ್ಯಮಂತ್ರಿ ಅಲ್ಲ, ಸಾಮಾಜಿಕ ನ್ಯಾಯದ ಧ್ವಜವಾಹಕರಾಗಿದ್ದಾರೆ.
- ದೇವರಾಜ ಅರಸು ಅವರು ತಮ್ಮ ಕಾಲದಲ್ಲಿ ಹೊಸ ರಾಜಕೀಯ ಭಾಷೆಯನ್ನು ಕಟ್ಟಿ ಕೊಟ್ಟರು.
- ಸಿದ್ದರಾಮಯ್ಯ ಅವರು ಅದೇ ಭಾಷೆಯನ್ನು ಇಂದಿನ ಸವಾಲಿನ ಕಾಲಘಟ್ಟದಲ್ಲಿ ಜೀವಂತವಾಗಿಟ್ಟಿದ್ದಾರೆ.
- ಬಹುಧ್ರುವೀಯ ರಾಜಕಾರಣ, ತೀವ್ರ ಮಾಧ್ಯಮ ಗಮನ ಮತ್ತು ವೇಗದ ಸಾರ್ವಜನಿಕ ಅಭಿಪ್ರಾಯದ ನಡುವೆ ಸಹ ಮೌಲ್ಯಗಳನ್ನು ಹಿಡಿದು ಕೊಂಡು ನಡೆಯುವುದು ಸುಲಭದ ಕೆಲಸವಲ್ಲ.
- ಆದರೆ ಸಿದ್ದರಾಮಯ್ಯ ಅವರು ಆ ಸವಾಲನ್ನು ಸಮರ್ಥವಾಗಿ ಎದುರಿಸಿದ್ದಾರೆ.
- ಇಂದು ಅವರು ದೇವರಾಜ ಅರಸು ಅವರ ಆಡಳಿತದ ದಾಖಲೆಯನ್ನು ಮುರಿಯುತ್ತಿರುವುದು ಒಂದು ಸಂಖ್ಯಾತ್ಮಕ ಸಾಧನೆಯಷ್ಟೇ ಅಲ್ಲ; ಅದು ಒಂದು ತತ್ವದ ಗೆಲುವು.
- ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಗೌರವ ಎಂಬ ಮೌಲ್ಯಗಳು ರಾಜಕೀಯದಲ್ಲಿ ಇನ್ನೂ ಪ್ರಸ್ತುತವಾಗಿವೆ ಎಂಬುದಕ್ಕೆ ಇದು ಸಾಕ್ಷಿ.

ಹೊಸ ಸಾಧ್ಯತೆಗಳನ್ನು ಸೃಷ್ಟಿಸುವ ಸಮಯದಲ್ಲಿ ಇಂಥ ಪ್ರಯೋಗಗಳು ಯಶಸ್ವಿಯಾಗುತ್ತವೆ. ಸಿದ್ದರಾಮಯ್ಯ ಈ ಹಾದಿಯಲ್ಲಿ ಮುನ್ನಡೆಯಬಹುದಿತ್ತು ಎನ್ನುವುದು ನಿಜವಾದರೂ ಅವರು ಆ ದಿಶೆಯಲ್ಲಿ ಹೆಜ್ಜೆ ಇಟ್ಟೇ ಇಲ್ಲ ಎಂದು ಸಾರಾಸಗಟಾಗಿ ಉಪೇಕ್ಷಿಸುವಂತೆಯೂ ಇಲ್ಲ.

ಸಿದ್ದರಾಮಯ್ಯನವರು ದೂರದೃಷ್ಟಿಯಿಂದ ಜಿಲ್ಲಾ ಪಂಚಾಯತ್, ನಗರ ಪಂಚಾಯತ್, ಪುರಸಭೆ, ನಗರಸಭೆಗಳಲ್ಲಿ ಅಹಿಂದ ಸಮುದಾಯಗಳಿಗೆ ರಾಜಕೀಯ ಮೀಸಲಾತಿ ಕೊಟ್ಟ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸರಕಾರಿ ಅಧಿಕಾರಿಗಳಿಗೆ ಬಡ್ತಿ ಮೀಸಲಾತಿ ನೀಡಿದ ಅವರ ಕ್ರಮಗಳು ಐತಿಹಾಸಿಕವಾಗಿದೆ.

**- ಬಿ.ಎಸ್.ಶಿವಣ್ಣ**

## 08-01-2026 ದಿನ ಭವಿಷ್ಯ

**ಮೇಷ:** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು, ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊದರೆಗೊಳಗಾಗಬಹುದು. ನೆರೆಮನೆಯವರ ಜೊತೆಗಿನ ಜಗಳ ನಿಮ್ಮ ಮನಸು ಕೆಡಿಸುತ್ತದೆ. ಆದರೆ ನಿಮ್ಮ ಸಹನೆ ಕಳೆದುಕೊಳ್ಳಬೇಡಿ, ಏಕೆಂದರೆ ಇದು ಬೆಂಕಿಗೆ ತುಪ್ಪ ಸುರಿಯುತ್ತದೆ.

**ವೃಷಭ:** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸ್ಯೆಗಳನ್ನು ದೂರ ಮಾಡಬಹುದು.

**ಮಿಥುನ:** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ನಿಮ್ಮ ಸಂಗಾತಿಯ ಜೊತೆಗಿನ ಸಂಬಂಧ ನಿಮ್ಮ ಕಚೇರಿ ಕೆಲಸದ ಕಾರಣ ಹಾಳಾಗಬಹುದು.

**ಕರ್ಕಾಟಕ:** ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಈ ಅವಧಿ ನಿಮ್ಮ ಹೊಸ ಯೋಜನೆಗಳು ಹಾಗೂ ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಒಳ್ಳೆಯದಾಗಿದೆ. ಇಂದು ಪ್ರೀತಿಪಾತ್ರರಿಗೆ ನಿಮ್ಮ ವಿಚಿತ್ರ ವರ್ತನೆಯ ಜೊತೆ ಏಗಲು ಅತ್ಯಂತ ಕಷ್ಟವಾಗುತ್ತದೆ.

**ಸಿಂಹ:** ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ಇಂದು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ. ಈ ದಿನ ನಿಮ್ಮ ಪ್ರೀತಿ ಜೀವನದ ವಿಚಾರದಲ್ಲಿ ಅಸಾಧಾರಣವಾಗಿದೆ.

**ಕನ್ಯಾ:** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು ಮತ್ತು ಒಳ್ಳೆಯ ಆರೋಗ್ಯವನ್ನು ಅನುಭವಿಸುವ ನಿಮ್ಮ ಹಾದಿಯಲ್ಲಿ ಅಡ್ಡ ಬರಬಹುದು. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು

**ತುಲಾ:** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ - ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ನಿಮ್ಮ ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ಹೊಸ ಸಂಬಂಧಗಳು ದೀರ್ಘಾವಧಿ ಮತ್ತು ಹೆಚ್ಚು ಅನುಕೂಲಕರವಾಗಿರುತ್ತವೆ.

**ವೃಶ್ಚಿಕ:** ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು. ಇದು ನಿಮ್ಮ ಹಣಕಾಸಿನ ಸ್ಥಿತಿಯನ್ನು ಹದಗೆಡಿಸುತ್ತದೆ ಆದರೆ ಸಂಬಂಧವನ್ನು ಬಲಪಡಿಸುತ್ತದೆ. ನೀವು ಇಂದು ಹಾಜರಾದ ಸಾಮಾಜಿಕ ಸಂತೋಷಕೂಟದಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ.

**ಧನು:** ಲೆಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಮತ್ತು ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ. ಅವನು(ಳು) ನಿಮ್ಮ ನಿರೀಕ್ಷೆಗಳನ್ನು ಪೂರೈಸುವುದು ನಿಮ್ಮ ಕನಸನ್ನು ನನಸಾಗಿಸಬಹುದು.

**ಮಕರ:** ಮನರಂಜನೆ ಮತ್ತು ಮೋಜಿನ ಒಂದು ದಿನ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸ್ಯೆಗಳನ್ನು ದೂರ ಮಾಡಬಹುದು. ಹತ್ತಿರದ ಗೆಳೆಯರು ಹಾಗು ಸ್ನೇಹಿತರು ಆಕ್ರಮಣಕಾರಿಯಾಗುತ್ತಾರೆ ಪಡೆಯಲು ಮತ್ತು ನಿಮಗೆ ಜೀವನವನ್ನು ಕಠಿಣಗೊಳಿಸುತ್ತಾರೆ.

**ಕುಂಭ:** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಮೇಲೆ ನಂಬಿಕೆಯನ್ನಿಡುವ ಅಗತ್ಯವಿದೆ.

**ಮೀನ:** ನಿಮ್ಮ ಕಾಯಿಲೆ ಅತೃಪ್ತಿಯ ಕಾರಣವಾಗಿರಬಹುದು. ಕುಟುಂಬದಲ್ಲಿ ಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟೂ ಬೇಗ ಇದರಿಂದ ಹೊರಬರುವ ಅಗತ್ಯವಿದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.



# ಕಾಡು ಉಳಿಸಿ - ನಾಡು ಉಳಿಸಿ

- **ನಾಡು ನಾಶವಾಗುತ್ತಿದೆ, ನಾಡು ಉಳಿಯುತ್ತಿಲ್ಲ. ಈಗ ನಿಜವಾಗಲೂ ರಕ್ಷಿಸಬೇಕಾಗಿರುವುದು ಕಾಡನ್ನಲ್ಲ ನಾಡನ್ನು ಎಂದರು. ಏಕೆಂದರೆ ಈ ನಾಡು ತನ್ನ ಭಾರಕ್ಕೆ, ತನ್ನ ತ್ಯಾಜ್ಯಕ್ಕೆ, ತನ್ನ ದುಷ್ಟತನಕ್ಕೆ ತಾನೇ ನಾಶವಾಗುವ ಹಂತ ತಲುಪಿದೆ. ಆದ್ದರಿಂದ ನಿಜವಾಗಲೂ ಆಗಬೇಕಾಗಿರುವುದು ಕಾಡಿನ ಉಳಿವಲ್ಲ, ನಾಡಿನ ಉಳಿವು.**

ಈ ತಕ್ಷಣಕ್ಕೆ ಯಾವುದು ಹೆಚ್ಚು ಮಹತ್ವದ್ದು ಮತ್ತು ತೀರಾ ಅನಿವಾರ್ಯವಾದದ್ದು? ಇತ್ತೀಚೆಗೆ ಶಾಂತಿಗಾಗಿ ನೊಬೆಲ್ ಪ್ರಶಸ್ತಿ ವಿಜೇತ ಟಿಬೆಟ್‌ನ ಬೌದ್ಧ ಧರ್ಮಗುರು ದಲೈಲಾಮಾ ಅವರನ್ನು ಭೇಟಿಯಾಗಲು ಉತ್ತರ ಕನ್ನಡದ ಮುಂಡಗೋಡ ಟಿಬೆಟಿಯನ್ ನಿರಾಶ್ರಿತರ ಶಿಬಿರಕ್ಕೆ ಹೋಗಿದ್ದೆವು. ಅತ್ಯಂತ ಶಿಸ್ತು ಬದ್ಧವಾಗಿ, ಆತ್ಮೀಯತೆಯಿಂದ, ಪ್ರೀತಿಯಿಂದ, ಕರುಣೆಯಿಂದ ಬರಮಾಡಿಕೊಂಡು, ಸ್ವಚ್ಛವಾಗಿ, ಸುಂದರವಾಗಿ, ವಿಶಾಲವಾಗಿ ಭವ್ಯವಾಗಿರುವ ಆ ಕಟ್ಟಡದಲ್ಲಿ ನಮ್ಮನ್ನು ಸ್ವಾಗತಿಸಿ ಭೇಟಿ ಮಾಡುವ ಅವಕಾಶ ಕಲ್ಪಿಸಲಾಯಿತು.

ಆ ಪ್ರಯಾಣದಲ್ಲಿ ಉತ್ತರ ಕನ್ನಡದ ಅತ್ಯಂತ ದಟ್ಟ ಕಾಡುಗಳ ನಡುವೆ, ಕಾಳಿ ನದಿಯ ಅಂಚಿನಲ್ಲಿ ಪ್ರಯಾಣ ಮಾಡುತ್ತಾ, ಅಲ್ಲಿನ ಕಾಡಿನ ಸಫಾರಿ, ಮೊಸಳೆ ಪಾರ್ಕ್, ಸ್ತೂಪ ಜಲಾಶಯ, ಕಾಳಿ ಜಲವಿದ್ಯುತ್ ಯೋಜನೆಯ ಎತ್ತರದ ಪ್ರದೇಶದಲ್ಲಿ ಪ್ರಾಕೃತಿಕ ಸೌಂದರ್ಯವನ್ನು ಸವಿಯುತ್ತಾ, ದಟ್ಟ ಕಾಡಿನ ನಡುವೆ ಬರುತ್ತಿರಬೇಕಾದರೆ ನನ್ನ ಆತ್ಮೀಯ ಮಿತ್ರರು, ಬೆಂಗಳೂರು ಜಲಮಂಡಳಿಯ ಉದ್ಯೋಗಿಯೂ ಆದ ಶ್ರೀ ಮಲ್ಲಿಕಾರ್ಜುನ್ ಅವರು ಒಂದು ಅತ್ಯಂತ ಗಮನಾರ್ಹವಾದ ಮತ್ತು ವ್ಯವಸ್ಥೆಯ ಇನ್ನೊಂದು ಮುಖವನ್ನು ಪರಿಚಯಿಸುವ ವಿಷಯ ಪ್ರಸ್ತಾಪಿಸಿದರು.

ಅಲ್ಲೆಲ್ಲಾ ರಸ್ತೆಗಳಲ್ಲಿ ಕಾಡು ಉಳಿಸಿ ನಾಡು ಉಳಿಸಿ ಕಾಡು ಉಳಿದರೆ ನಾಡು ಉಳಿಯುತ್ತದೆ ಹಸಿರೇ ಉಸಿರು ವೃಕ್ಷೋ ರಕ್ಷತಿ ರಕ್ಷಿತ: ಕಾಡಿಲ್ಲದೆ ನಾಡಿಲ್ಲ..... ಮುಂತಾದ ಕಾಡನ್ನು, ಪರಿಸರವನ್ನು ರಕ್ಷಿಸುವ ಮಹತ್ವದ ಜಾಗೃತಿ ಸಂದೇಶಗಳನ್ನು ಬರೆದ ಫಲಕಗಳನ್ನು ತೋರಿಸುತ್ತಾ ಹೇಳಿದರು,

ಮನುಷ್ಯನ ಎಷ್ಟೆಲ್ಲಾ ಆಕ್ರಮಣದ ನಡುವೆಯೂ ಕಾಡು ಇನ್ನೂ ಸಾಕಷ್ಟು ಉಳಿದಿದೆ. ಉಳಿಯುತ್ತಿದೆ, ಬೆಳೆದಿದೆ, ಬೆಳೆಯುತ್ತಲೇ ಇರುತ್ತದೆ. ಆದರೆ ನಿಜವಾದ ಸಮಸ್ಯೆ ಇರುವುದು ನಾಡಿನಲ್ಲಿ. ನಾಡು ನಾಶವಾಗುತ್ತಿದೆ, ನಾಡು ಉಳಿಯುತ್ತಿಲ್ಲ. ಈಗ ನಿಜವಾಗಲೂ ರಕ್ಷಿಸಬೇಕಾಗಿರುವುದು ಕಾಡನ್ನಲ್ಲ ನಾಡನ್ನು ಎಂದರು. ಏಕೆಂದರೆ ಈ ನಾಡು ತನ್ನ ಭಾರಕ್ಕೆ, ತನ್ನ ತ್ಯಾಜ್ಯಕ್ಕೆ, ತನ್ನ ದುಷ್ಟತನಕ್ಕೆ ತಾನೇ ನಾಶವಾಗುವ ಹಂತ ತಲುಪಿದೆ. ಆದ್ದರಿಂದ ನಿಜವಾಗಲೂ ಆಗಬೇಕಾಗಿರುವುದು ಕಾಡಿನ ಉಳಿವಲ್ಲ, ನಾಡಿನ ಉಳಿವು. ಅದಕ್ಕಾಗಿಯೇ ಮನುಷ್ಯನನ್ನು ಶಿಕ್ಷಣ ನೀಡಿ ವಿದ್ಯಾವಂತರನ್ನಾಗಿ ಮಾಡಿದರೆ, ಅದೇ ಶಿಕ್ಷಣದಿಂದ ಇದೇ ಮನುಷ್ಯರು ಅಜ್ಞಾನಿಗಳಾಗಿ, ಅನಾಗರಿಕರಾಗಿ ಎಲ್ಲವನ್ನೂ ಧ್ವಂಸ ಮಾಡುತ್ತಾ, ಸಿಮೆಂಟ್ ಕಾಂಕ್ರಿಟ್ ನಗರಗಳನ್ನು ನಿರ್ಮಿಸುತ್ತಾ, ತಾವೇ ನಾಶವಾಗುತ್ತಿದ್ದಾರೆ. ಆದ್ದರಿಂದ ಆಗಬೇಕಾಗಿರುವ ಕೆಲಸ ನಾಡು ಉಳಿಸಿ ಎಂಬುದು ಎಂದು ವ್ಯಂಗ್ಯವಾದರೂ ಬಹುತೇಕ ವಾಸ್ತವದ ಹತ್ತಿರಕ್ಕೆ ಇರುವ ವಿಷಯವನ್ನು ಪ್ರಸ್ತಾಪಿಸಿದರು.

ನಿಜಕ್ಕೂ ಒಂದು ಕ್ಷಣ ಅವಾಕ್ಕಾದೆ. ಹೌದೌದು, ಅವರ ಮಾತಿನಲ್ಲಿ ಸಂಪೂರ್ಣ ಸತ್ಯಾಂಶವಿದೆ ಎನಿಸಿತು. ಇಂದು ಕೇವಲ ಬೆಂಗಳೂರು ಅಥವಾ ಬೆಳಗಾವಿ, ಹುಬ್ಬಳ್ಳಿ, ಕೋಲಾರ, ಕಲಬುರ್ಗಿ, ರಾಯಚೂರು ಮುಂತಾದ ಧೂಳಿನ ನಗರಗಳು ಮಾತ್ರವಲ್ಲ ಬಹುತೇಕ ಸಣ್ಣ ಪಟ್ಟಣಗಳು ಸಹ ಗಾಳಿ, ನೀರು, ಆಹಾರದ ವಿಷಯದಲ್ಲಿ ಅತ್ಯಂತ ಕೆಳಮಟ್ಟ ತಲುಪಿದೆ. ವಾಸಿಸಲು ಯೋಗ್ಯವೇ ಅಲ್ಲದ ಭೌಗೋಳಿಕ ವಾತಾವರಣವನ್ನು ನಿರ್ಮಿಸಿದೆ. ಎಲ್ಲೆಲ್ಲೂ ಧೂಳಿನ ಕಣಗಳು, ಕಲುಷಿತ ನೀರು, ವಿಷಯುಕ್ತ, ರಾಸಾಯನಿಕಯುಕ್ತ ಕಲಬೆರಕೆ ಆಹಾರಗಳು ನಮ್ಮನ್ನು ನಾಶ ಮಾಡುತ್ತಿದೆ.

ಇದು ಜೈವಿಕ ನಾಶವಾದರೆ, ಇಡೀ ಸಮಾಜದ ಮಾನವೀಯ ಮೌಲ್ಯಗಳು ನಾಶವಾಗಿರುವುದು ಮಾತ್ರವಲ್ಲ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿವೆ. ಮನುಷ್ಯರ ನಡುವೆ ಇರಬೇಕಾದ ನಂಬಿಕೆ, ಪ್ರೀತಿ, ವಿಶ್ವಾಸ, ಸ್ನೇಹ, ಕರುಣೆ, ತ್ಯಾಗ, ಕ್ಷಮೆ, ಸಹಕಾರ, ಸಮನ್ವಯ, ಸಂಬಂಧಗಳಂತ ಯಾವ ಮೌಲ್ಯಗಳೂ ಇಂದು ತನ್ನ ಮೂಲ ಸ್ವರೂಪದಲ್ಲಿ ಉಳಿದಿಲ್ಲ. ಎಲ್ಲೆಲ್ಲೂ ಅಸಹಕಾರ, ಅಸಹನೆ, ಅಸಹಿಷ್ಣುತೆ, ವಂಚನೆ, ದ್ರೋಹ, ಅಪನಂಬಿಕೆ, ಕೋಪ, ಅಸೂಯೆ, ಅನುಮಾನ ಮನೆ ಮಾಡಿದೆ. ನೆಮ್ಮದಿ, ಸುಖ, ಸಂತೋಷ, ತೃಪ್ತಿ ಮರೆಯಾಗುತ್ತಿದೆ. ಕೊಲೆ, ಅತ್ಯಾಚಾರ, ಆತ್ಮಹತ್ಯೆ, ಭ್ರಷ್ಟಾಚಾರ, ಕುತಂತ್ರ ತಾಂಡವವಾಡುತ್ತಿದೆ. ಮನುಷ್ಯನ ಮಾನಸಿಕ ಮತ್ತು ದೈಹಿಕ ಆರೋಗ್ಯ ಕೆಳಮಟ್ಟಕ್ಕೆ ಇಳಿಯುತ್ತಿದೆ.

ಒಮ್ಮೆ ಸ್ವಲ್ಪ ಕಲ್ಪಿಸಿಕೊಂಡು ನೋಡಿ. ಒಂದು ವೇಳೆ ಬೆಂಗಳೂರಿನಲ್ಲಿ ಯಾವುದೋ ತಾಂತ್ರಿಕ ತೊಂದರೆಯಿಂದಲೋ, ಬೇರೆ ತೊಂದರೆಯಿಂದಲೋ ಇಲ್ಲಿನ ಕಸವನ್ನು ಒಂದು ವಾರ ವಿಲೇವಾರಿ ಮಾಡದಿದ್ದರೆ ಇಡೀ ಕಸದ ರಾಶಿಯಲ್ಲಿ ಬೆಂಗಳೂರು ಮುಳುಗಿ ಹೋಗುತ್ತದೆ. ಹಾಗೆಯೇ ಒಂದು ವೇಳೆ ವಿದ್ಯುತ್ ಅಥವಾ ನೀರಿನ ಸೌಲಭ್ಯ ಸಿಗದಿದ್ದರೆ ನಗರವೇ ಬೆಚ್ಚಿ ಬೀಳುತ್ತದೆ. ಭದ್ರತೆಯಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಾದರೂ ಇಡೀ ನಗರವನ್ನೇ ದೋಚಲಾಗುತ್ತದೆ. ಇದು ಸದ್ಯಕ್ಕೆ ಕೇವಲ ಬೆಂಗಳೂರಿನಂತ ಮಹಾನಗರಗಳಿಗೆ ಮಾತ್ರ ಸೀಮಿತವಾಗಿದ್ದರೂ ಎಲ್ಲಾ ನಗರ, ಪಟ್ಟಣಗಳಲ್ಲೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಇದೆ.

ಹೀಗೆ ನಗರಗಳು, ಇಲ್ಲಿನ ಜನಜೀವನ ವಿನಾಶದಂಚಿಗೆ ತಲುಪಿರುವಾಗ ನಾವು ತುಂಬಾ ಯೋಚಿಸಬೇಕಿರುವುದು, ಶ್ರಮಪಡಬೇಕಾಗಿರುವುದು ನಗರಗಳ ವಿನಾಶದ ಬಗ್ಗೆ, ನಗರಗಳ ಪುನರ್ ನಿರ್ಮಾಣದ ಬಗ್ಗೆ, ನಗರಗಳನ್ನು ಮತ್ತೆ ನಾಗರಿಕ ಜೀವನಕ್ಕೆ ಅಣಿಗೊಳಿಸುವ ಬಗ್ಗೆ. ಹಾಗೆಂದು ಕಾಡು ನಾಶ ಮಾಡಬೇಕು ಅಥವಾ ಕಾಡನ್ನು ನಿರ್ಲಕ್ಷಿಸಬೇಕು ಎಂದಲ್ಲ.

ಕಾಡು ಬೆಳೆಯುವುದು ಅತ್ಯಂತ ಸಹಜವಾದದ್ದು. ಅದು ಪರಿಸರದ ಬಹುದೊಡ್ಡ ಭಾಗ. ಕಾಡನ್ನು ಅದರ ಪಾಡಿಗೆ ಬಿಟ್ಟರೆ ಸಾಕು, ಅದು ಸಹಜವಾಗಿಯೇ ಬೆಳೆಯುತ್ತದೆ. ಆದರೆ ನಾಡು ಹಾಗಲ್ಲ. ನಾಡು ಕೃತಕವಾಗಿ ನಿರ್ಮಾಣವಾದದ್ದು. ಅದನ್ನು ಅರಿವಿನಿಂದ, ಜವಾಬ್ದಾರಿಯಿಂದ ನಿರ್ವಹಿಸಬೇಕು. ಇಲ್ಲದಿದ್ದರೆ ಕಾಡಿಗಿಂತ ಮೊದಲು ನಾಡೇ ನಾಶವಾಗುತ್ತದೆ. ನಾಗರಿಕತೆಯ, ಆಧುನಿಕತೆಯ ಉತ್ತುಂಗದಲ್ಲಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ನಾವು ವಿನಾಶದಂಚಿಗೆ ಸರಿಯುತ್ತಿರುವ ವಿಷಯವೇ ನಮ್ಮ ಅರಿವಿಗೆ ಬರುತ್ತಿಲ್ಲ. ಅಷ್ಟೊಂದು ಅಸೂಕ್ಷ್ಮವಾಗಿದ್ದೇವೆ, ವಿವೇಚನ ರಹಿತವಾಗಿದ್ದೇವೆ. ಇದು ಅತ್ಯಂತ ಆತಂಕಾರಿ ಮತ್ತು ಆಘಾತಕಾರಿ. ಕನಿಷ್ಠ ಪ್ರಜ್ಞಾವಂತ ಸಮುದಾಯ ಈ ವಿಷಯವನ್ನು ಕುರಿತು ಯೋಚಿಸುವಂತಾಗಲಿ,

**- ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಪಶುಪಾಲನೆಗೆ ಸಹಕಾರಿ ಮೊಳಕೆ ಮೇವು ಉತ್ಪಾದನೆ

ಹೈನುಗಾರಿಕೆ ಮಾಡುವುದೆಂದರೆ ಅದಕ್ಕೆ ಬರೇ ಹಸು ಮಾತ್ರ ಇದ್ದರೆ ಸಾಲದು. ಮೇವು ಉತ್ಪಾದನೆ ಮಾಡಬೇಕು. ಅದಕ್ಕೆ ಹಟ್ಟಿಗಿಂತ ಹತ್ತು ಪಾಲು ಸ್ಥಳಾವಕಾಶ ಬೇಕು. ನೀರಾವರಿ ಬೇಕು. ಹಸುವಿಗಿಂತ ಹೆಚ್ಚು ಅದಕ್ಕೆ ಖರ್ಚು ತಗಲುತ್ತದೆ. ಇದನ್ನು ಹೋಗಲಾಡಿಸಿ ಕಡಿಮೆ ಸಂಪನ್ಮೂಲ ಬಳಕೆ ಮಾಡಿ ಮೇವು ಉತ್ಪಾದಿಸುವ ತಾಂತ್ರಿಕತೆಯಾಗಿ ಬಂದದ್ದೇ ಹೈಡ್ರೋಫೋನಿಕ್ ತಾಂತ್ರಿಕತೆ. ಇದರಲ್ಲಿ ಮಣ್ಣು ರಹಿತವಾಗಿ ಮೇವಿನ ಸಸಿ ಬೆಳೆಯಲಾಗುತ್ತದೆ. ಆದ ಕಾರಣ ಇದಕ್ಕೆ ಹೈಡ್ರೋಫೋನಿಕ್ ಅಥವಾ ಜಲ ಕೃಷಿಯಲ್ಲಿ ಮೇವು ಉತ್ಪಾದನೆ ಎನ್ನುತ್ತಾರೆ. ಸುಮಾರು 8 ವರ್ಷದ ಹಿಂದೆ ಹೈಡ್ರೋಫೋನಿಕ್ ವಿಧಾನದಲ್ಲಿ ಮೇವು ಬೆಳೆಸುವ ವಿಧಾನ ನಮ್ಮಲ್ಲಿ ಪ್ರಚಾರಕ್ಕೆ ಬಂತು. ಅದಕ್ಕಾಗಿ ಮೇವು ಉತ್ಪಾದಿಸುವ ಸ್ವಯಂ ಚಾಲಿತ ಮನೆಗಳನ್ನು ಒದಗಿಸಿಕೊಡುವ ವ್ಯವಸ್ಥೆ ಬಂತು. ಈ ವಿಧಾನದಲ್ಲಿ ತ್ವರಿತವಾಗಿ ಮೇವು ಉತ್ಪಾದನೆ ಮಾಡಲಾಗುತ್ತದೆ. ಹೆಚ್ಚು ಸ್ಥಳಾವಕಾಶ ಬೇಡ. ಕೆಲಸದವರೂ ಹೆಚ್ಚು ಬೇಡ. ನೀರು ಉಳಿತಾಯವಾಗುತ್ತದೆ ಎಂಬ ಕಾರಣಕ್ಕೆ ಇದು ಜನಪ್ರಿಯವೂ ಆಯಿತು. ಆದರೆ ಆ ಸಮಯದಲ್ಲಿ ಇದ್ದ ವ್ಯವಸ್ಥೆಗಳು ದೊಡ್ಡ ಪ್ರಮಾಣದ ಹೈನುಗಾರರನ್ನೇ ಗುರಿಯಾಗಿಸಿಕೊಂಡಿತ್ತು. ಹೆಚ್ಚು ಬೆಲೆ ಕೊಟ್ಟು ಖರೀದಿಸಬೇಕಾಗಿತ್ತು. ವಿದ್ಯುತ್ ಶಕ್ತಿ ಬೇಕಾಗಿತ್ತು. ಸಣ್ಣ ಪ್ರಮಾಣದ ಹೈನುಗಾರರಿಗೆ ಇದು ಕೈಗೆಟಕದ್ದಾಗಿತ್ತು.

ಈಗ ಈ ತಾಂತ್ರಿಕತೆಯಲ್ಲಿ ಹಲವಾರು ಮಾರ್ಪಾಡುಗಳಾಗಿದ್ದು. ಕಡಿಮೆ ವೆಚ್ಚದಲ್ಲಿ ಮೇವು ಉತ್ಪಾದಿಸುವ ವ್ಯವಸ್ಥೆಗಳನ್ನು ಮಾಡಿಕೊಡುವವರು ಅಲ್ಲಲ್ಲಿ ತಮ್ಮ ವ್ಯವಹಾರ ಪ್ರಾರಂಭಿಸಿದ್ದಾರೆ. ಈ ವ್ಯವಸ್ಥೆಗಳು ಕಡಿಮೆ ಬೆಲೆಯದಾಗಿದ್ದು ತುಂಬಾ ಸರಳ ವ್ಯವಸ್ಥೆಯಾಗಿ ಸ್ವ ತಯಾರಿಕೆ ಸಹ ಮಾಡಿಕೊಳ್ಳುವಂತದ್ದಾಗಿದೆ.





ಮೊಳಕೆ ಕಾಳುಗಳ ಮೇವು ಉತ್ಪಾದನೆ ಎಂದರೆ ದ್ವಿದಳ ಬೀಜ (ಜೋಳ, ಹೆಸರು, ಹುರುಳಿ ಯಾವುದಾದರೂ) ಗಳನ್ನು ನೆನೆ ಹಾಕಿ ಅದನ್ನು ದಪ್ಪಕ್ಕೆ ಅದಕ್ಕಾಗಿಯೇ ಇರುವ ಪ್ಲಾಸ್ಟಿಕ್ ಟ್ರೇ ಗಳಲ್ಲಿ ದಪ್ಪಕ್ಕೆ ಬಿತ್ತನೆ ಮಾಡಿ ಕೇವಲ ನೀರು ಮಾತ್ರ ಕೊಡುತ್ತಾ ಎಂಟು ದಿನಗಳ ಕಾಲ ಬೆಳೆಸಿ ಸುಮಾರು ಅರ್ಧ ಅಡಿ ಎತ್ತರದ ಸಸಿಯಾಗುವಾಗ ಅದನ್ನು ಪಶುಗಳಿಗೆ ಮೇವಾಗಿ ಕೊಡುವುದು. 8 ದಿನಕ್ಕಿಂತ ಹೆಚ್ಚು ಇಡಬಾರದು. ಒಂದು ಕಿಲೋ ಜೋಳವನ್ನು ನೆನೆಸಿ ಮೊಳಕೆ ಬರಿಸಿ ಸಸಿ ಮಾಡಿದಾಗ ಅದು ತನ್ನ ತೂಕವನ್ನು 10 ಪಟ್ಟು ಹೆಚ್ಚಿಸಿಕೊಳ್ಳುತ್ತದೆ. ಅಂದರೆ 10 ಕಿಲೋ ಜೋಳದ ಬಿತ್ತನೆ ಮಾಡಿದಾಗ ಅದರಿಂದ ದೊರೆಯುವ ಮೇವು 100 ಕಿಲೋ ಆಗುತ್ತದೆ. ಇತ್ತೀಚೆಗೆ ಎಲ್ಲಾ ಕೃಷಿ ವಸ್ತು ಪ್ರದರ್ಶನಗಳಲ್ಲಿ ಈ ಮೇವು ಉತ್ಪಾದನಾ ವ್ಯವಸ್ಥೆ ತಯಾರಕರ ಪ್ರದರ್ಶನಗಳಿರುತ್ತವೆ. ಸುಮಾರು 100 ಚದರ ಅಡಿಯ ಅಥವಾ ಅದಕ್ಕಿಂತ ಕಡಿಮೆ ಸ್ಥಳಾವಕಾಶದ ಮೇವು ಉತ್ಪಾದನಾ ಘಟಕ ತಯಾರಿಕೆಗೆ ಸುಮಾರು 25000 ದಿಂದ 30000 ಸಾವಿರ ತನಕ ಆಗುತ್ತದೆ ಎನ್ನುತ್ತಾರೆ. ಇದನ್ನು ಅವರವರೇ ತಯಾರಿಸಿಕೊಂಡರೂ ಇಷ್ಟೇ ಬೆಲೆ ಆಗಬಹುದು.

ಸಾಮಾನ್ಯವಾಗಿ ಹೆಚ್ಚಿನವರು ಯುಪಿವಿಸಿ ಪೈಪುಗಳನ್ನು ಪರಸ್ಪರ ಪಿಟ್ಟಿಂಗುಗಳ ಮೂಲಕ ಜೋಡಿಸಿ ಈ ಮೇವು ಉತ್ಪಾದನಾ ಮನೆಗಳನ್ನು ತಯಾರಿಸಿರುತ್ತಾರೆ. ಮನೆಯನ್ನು ನೆರಳು ಬಲೆಯಲ್ಲಿ ಮುಚ್ಚಿರುತ್ತಾರೆ. ಇದರ ಬದಲು ಇಡೀ ಮನೆಯನ್ನು ಅಲ್ಯೂಮಿನಿಯಂ ಫಾಬ್ರಿಕೇಷನ್ ಪೈಪುಗಳ ಮೂಲಕ ಸಿದ್ದಪಡಿಸಿಕೊಳ್ಳಬಹುದು. ಇದು ಸ್ವಲ್ಪ ಹೆಚ್ಚು ಭಾರವನ್ನು ತಡೆದುಕೊಳ್ಳುವ ಶಕ್ತಿ ಪಡೆದಿರುತ್ತದೆ. ನೆರಳು ಬಲೆ ಹೊದಿಸುವ ಬದಲಿಗೆ ಪಾಲಿಥೀನ್ ಶೀಟನ್ನು ಹೊದಿಸಿದರೆ ಒಳಗೆ ಮೊಳಕೆಗಳು ಇನ್ನೂ ಸ್ವಲ್ಪ ಹೆಚ್ಚು ಬೆಳವಣಿಗೆಯನ್ನು ಹೊಂದಲು ಸಹಾಯಕವಾಗುತ್ತದೆ.

**- ರಾಧಾಕೃಷ್ಣ** ಹೊಳ್ಳ

# ನಾಲಿಗೆಯಿಂದಲೇ ಸ್ವರ್ಗ : ನಾಲಿಗೆಯಿಂದಲೇ ನರಕ



ಎಷ್ಟೊಂದು ಸತ್ಯವಾದ ನಾಣ್ನುಡಿ. ಕುಲಕುಲವೆಂದು ಹೊಡೆದಾಡದಿರಿ, ತಮ್ಮ ಕುಲದ ನೆಲೆಯನೇನಾದರು ಬಲ್ಲಿರಾ? ಹಾಡಿದವರು ದಾಸಶ್ರೇಷ್ಠರು. ನಾಲಿಗೆ ಕುಲವನರುಹಿತು ಮಹಾಭಾರತ ಮಹಾಕಾವ್ಯದಲ್ಲಿ ಉಲ್ಲೇಖವಾದ ಸಾಲುಗಳಿವು. ನಾಲಿಗೆಯಿಂದಲೇ ಮಾತು, ನಾಲಿಗೆಯಿಂದಲೇ ಮೃತ್ಯು ಅಬ್ಬಬ್ಬಾ ಈ ಮನುಷ್ಯನ ನಾಲಿಗೆಯ ಚರಿತ್ರೆಯೇ. ನಾಲಿಗೆ ಶುದ್ಧ, ಸ್ವಚ್ಛವಾಗಿರಲಿ. ಆಡುವ ಮಾತುಗಳು ಹಿತವಾಗಿರಲಿ. ಕೇಳುಗರಿಗೆ ಪ್ರಿಯವಾಗಿರಲಿ. ಪ್ರಾಥಮಿಕ ಶಾಲೆಯಲ್ಲಿ ಉಪಪಠ್ಯವೆಂದು ಒಂದು ಪುಸ್ತಕ ಭಾಷಾಪಾಠದಲ್ಲಿತ್ತು. ಅದರಲ್ಲಿರುವ ಕಥೆಗಳನ್ನು ರಂಗುರಂಗಾಗಿ, ಅಭಿನಯದೊಂದಿಗೆ ನಮಗೆ ಶಿಕ್ಷಕರು ಹೇಳುತ್ತಿದ್ದರು. ಓರ್ವ ಅರಸನು ಈ ವಿಶ್ವದಲ್ಲಿ ಅತ್ಯಂತ ಅಮೂಲ್ಯವಾದ, ಶ್ರೇಷ್ಠವೆನಿಸಿದ ವಸ್ತು ಯಾವುದೆಂದು ಮಂತ್ರಿ ಹತ್ತಿರ ಕೇಳಿದನಂತೆ. ತಕ್ಷಣ ಮಂತ್ರಿ ಹೇಳಿದ ಉತ್ತರ ನಾಲಿಗೆ. ಯಾಕೆ? ಹೇಗೆ? ಅರಸನ ಮರುಪ್ರಶ್ನೆ. ಬುದ್ಧಿವಂತ ಮಂತ್ರಿ ಬಿಡಲಿಲ್ಲ. ಸ್ವಾಮಿ ಈ ನಾಲಗೆಯಿದೆಯಲ್ಲ, ಇದು ಒಂದು ಕುಟುಂಬವನ್ನೇ ಉನ್ನತಮಟ್ಟಕ್ಕೆ ಒಯ್ಯಬಹುದು, ನಾಡನ್ನು ದೇಶವನ್ನು ಕಟ್ಟಬಹುದು, ಬಾಂಧವ್ಯಗಳನ್ನು ಬೆಸೆಯಬಹುದು. ಉತ್ತಮೋತ್ತಮ ನುಡಿಗಳಿಂದ ರಂಜಿಸಬಹುದು. ಅಜ್ಞಾನಿಗಳ ಮನಸ್ಸನ್ನು ತಿದ್ದಿ ಸುಜ್ಞಾನಿಗಳನ್ನಾಗಿಸಬಹುದು. ಸಂಗೀತ, ನಾಟಕ ಎಲ್ಲವೂ ನಾಲಿಗೆಯ ಪ್ರಭಾವ. ಸಂತಸದ ಶರಧಿಯ ಸೂತ್ರಧಾರ ನಾಲಿಗೆ. ಬಾಯಿಯೊಳಗಿರುವ 32 ಹಲ್ಲುಗಳಿಗೆ ನಾಲಿಗೆಯೇ ಮುಖ್ಯಸ್ಥ. ಬೇಕಾದಂತೆ ಆಟ ಆಡಿಸುವುದು. ಹಲ್ಲುಗಳ ನಡುವೆ ಸಿಕ್ಕಿ ಬೀಳದ ಜಾಣತನ ನಾಲಿಗೆಗಿದೆ. ನಾಲಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದೆ ಗಾದೆ ಮಾತಿದೆ. ಇನ್ನೂ ಒಂದು ವಿಚಾರವಿದೆ. ನಾಲಿಗೆ ಹಾಳಾದರೆ ಊರೆಲ್ಲ ಹಾಳು, ಮಸಣವಾಗಬಹುದು. ಆಡುವ ಮಾತು ಮುತ್ತಿನ ಹಾಗೆ ಮೌಲ್ಯದಿಂದಿರಬೇಕು. ಸುಳ್ಳು ಹೇಳಬಾರದು. ದೂಷಣೆ, ಅಪಹಾಸ್ಯ, ವ್ಯಂಗ್ಯ, ಕೋಪ, ಕೊಂಕು ಮಾತು ಮಸಣಕ್ಕೆ ದಾರಿ ಸ್ವಾಮಿ. ಮಾತು ಉಸಿರನ್ನೇ ನಿಲ್ಲಿಸಬಹುದು. ಎಲ್ಲಿಯಾದರೂ ಸಿಟ್ಟು ನೆತ್ತಿಗೇರಿ ಬೈಗುಳ ಸುರಿಸಿದರೆ, ಎದುರಾಳಿ ಕೆನ್ನೆಗೆ ಹೊಡೆದರೆ ಇವನ 32 ಹಲ್ಲುಗಳು ಅಲುಗಾಡಬಹುದು, ಬೀಳಲೂ ಬಹುದು. ವಿಚಾರ ಮಾಡದ, ವಿಮರ್ಶೆ ಮಾಡದವರು ಕೆಟ್ಟದ್ದನ್ನೇ ನಂಬಿ ಮತ್ತಷ್ಟೂ ದ್ವೇಷ ಕಾರುವರು. ಒಳಿತು, ಕೆಡುಕಿನ ಸರದಾರ ನಾಲಿಗೆ. ಮಾತು ಹಿತ-ಮಿತವಾಗಿರಬೇಕು ಪ್ರಭು, ಹಾಗಾಗಿ ನಾಲಗೆಯಿಂದಲೇ ಎಲ್ಲವೂ. ಅರಸನೂ ಮೆಚ್ಚಿ ತಲೆದೂಗಿ ಬಹುಮಾನ ನೀಡಿದನಂತೆ. ಆಚಾರವಿಲ್ಲದ ನಾಲಿಗೆ, ನಿನ್ನ ನೀಚ ಬುದ್ಧಿಯ ಬಿಡು★ ನಾಲಿಗೆ ಅಲ್ಲವೇ? ವಿಚಾರ ಮಾಡಿ ಪರರ ದೂಷಿಸುವುದಕೆ ಚಾಚಿ ಕೊಂಡಿರುವ ನಾಲಿಗೆ ದಾಸವರೇಣ್ಯರು ಹಾಡಿದರು.

ನಾವು ಕಂಡು ಕೇಳಿದ ಹಾಗೆ ನಾಲಿಗೆಯಾಡಿದ ನುಡಿಗಳಿಂದಾಗಿ ಇಂದು ಬಹುತೇಕ ಕುಟುಂಬಗಳ ಸದಸ್ಯರು ಬಳಲುತ್ತಿದ್ದಾರೆ. ಒಂದೆಡೆ ನಾನು ನನ್ನದೆಂಬ ವ್ಯಾಮೋಹ, ನನ್ನ ಗಂಡ/ಹೆಂಡತಿ, ಮಕ್ಕಳು ಮಾತ್ರ, ಬೇರೆಯವರೆಲ್ಲ ಕಾಲಿಗೆ ತೊಡರುವ ಬಳ್ಳಿಗಳೆಂಬ ಮನೋಭಾವ, ಸ್ವಾರ್ಥ ಇದಕ್ಕೆ ಪೂರಕ ನಾಲಿಗೆಯಿಂದ ಬರುವ ಮಾತುಗಳು ಸೇರಿ ಕುಟುಂಬ ಛಿದ್ರವಾದ್ದೂ ಇದೆ. ಅವರಿಗೆ ಬುದ್ಧಿಬರುವಾಗ ತಲೆಕೂದಲು ಬೆಳ್ಳಗಾಯಿತು, ನಿಲ್ಲಲೂ ಶಕ್ತಿಯಿಲ್ಲ, ಹಲವಾರು ಕುಟುಂಬ ಸದಸ್ಯರನ್ನು ಕಳೆದುಕೊಂಡಾಗಿರುತ್ತದೆ. ನಾವು ಸಹ ನಾಲಿಗೆ ಇದೆಯೆಂದು ಮಾತನಾಡದೆ ವಿಮರ್ಶಿಸಿ ಮಾತನಾಡೋಣ. ಸತ್ಕಾರ್ಯಕ್ಕೆ ನಾಲಿಗೆಯ ನುಡಿಗಳಿರಲಿ. ಆಡದೆ ಕರ್ತವ್ಯ ಮಾಡುವ ಸಾಲಿನಲ್ಲಿ ನಿಲ್ಲೋಣ.

ಲಕ್ಷ್ಮೀರ್ವಸತಿ ಜಿಹ್ವಾಗ್ರೇ ಜಿಹ್ವಾಗ್ರೇ ಮಿತ್ರಬಾಂಧವಾ:/
ಜಿಹ್ವಾಗ್ರೇ ಬಂಧನಂ ಪ್ರಾಪ್ತಂ ಜಿಹ್ವಾಗ್ರೇ ಮರಣಂ ಧ್ರುವಮ್//

**- ರತ್ನಾ ಕೆ ಭಟ್ಟ** ತಲಂಜೇರಿ

# ಯೋಜನೆ ಅನುಷ್ಟಾನದಲ್ಲಿ ಕಾರ್ಯಾಂಗದ ಮಹತ್ವವೂ ಇದೆ

## ಬಹುತೇಕ ಸಮಸ್ಯೆಗಳಿಗೆ ಗ್ರಾ.ಪಂ. ಪಿಡಿಒ ಗಳ ಕಾರ್ಯ ವೈಖರಿಯೇ ಕಾರಣ: ಶಾಸಕ ಕೆ.ಎಂ.ಶಿ.

• ಪ್ರಜೋದಯ ವರದಿ

**ಅರಸೀಕೆರೆ:** ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಶಾಸಕಾಂಗದ ಮಹತ್ವದಷ್ಟೇ ಕಾರ್ಯಾಂಗದ ಮಹತ್ವವೂ ಇದೆ ಎಂದು ರಾಜ್ಯ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷರು ಆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ಗೀಜಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನ ಸಂಪರ್ಕ ಸಭೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇಬ್ಬರೂ ಜನರ ಸೇವಕರು, ಅದನ್ನ ಅರಿತು ನಾವು ನಡೆದಿದ್ದೇ ಆದರೆ ಜನರ ಪ್ರೀತಿ, ವಿಶ್ವಾಸ ಗಳಿಸಲು ಸಾಧ್ಯವಾಗಲಿದೆ ಎಂದು ಅವರು ಕಿವಿಮಾತು ಹೇಳಿದರು.

ಸರ್ಕಾರಿ ಕಚೇರಿಗಳಲ್ಲಿ ತಮ್ಮ ಕೆಲಸ-ಕಾರ್ಯಗಳು ಸುಗಮವಾಗಿ ಆಗುತ್ತಿಲ್ಲ. ಅನಾವಶ್ಯಕವಾಗಿ ಅಧಿಕಾರಿಗಳು ಸುತ್ತಿಸುತ್ತಿದ್ದಾರೆ ಎಂದು ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಗ್ರಾಮೀಣ ಭಾಗದ ಜನತೆ ನಮ್ಮ ಮನೆ ಮತ್ತು ಕಚೇರಿಗೆ ಬರುತ್ತಿದ್ದರು. ಇದನ್ನು ಸರಿಪಡಿಸುವ ಉದ್ದೇಶದಿಂದಲೇ ನಾನೇ ಜನತೆಯ ಮನೆ ಬಾಗಿಲಿಗೆ ಹೋಗಿ ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡಬೇಕೆಂಬ ಆಶಯದೊಂದಿಗೆ ಗ್ರಾಮ ಪಂಚಾಯಿತಿವಾರು ಜನಸಂಪರ್ಕ ಸಭೆ ಹಮ್ಮಿಕೊಂಡಿರುವುದಾಗಿ ಹೇಳಿದ ಅವರು, ಜನಸಂಪರ್ಕ ಸಭೆಯಲ್ಲಿ ಗ್ರಾಮೀಣ ಭಾಗದ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ದೊರಕಿಸಿ ಕೊಡಲಾಗುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಗ್ರಾಮೀಣ ಭಾಗದ ಜನತೆ ಎದುರಿಸುತ್ತಿರುವ ಬಹುತೇಕ ಸಮಸ್ಯೆಗಳಿಗೆ ಸ್ಥಳೀಯ ಗ್ರಾಮ ಪಂಚಾಯತಿಗಳ ಪಿಡಿಒ ಗಳ ಕಾರ್ಯ ವೈಖರಿಯೇ ಕಾರಣವಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಪಿಡಿಒಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡದೇ ಹೋದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು.



ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್ ಅವರು ಮಾತನಾಡಿ, ಅಭಿವೃದ್ಧಿ ಯೋಜನೆಗಳು, ಮೂಲಭೂತ ಸೌಕರ್ಯಗಳು ನಗರದ ಜನತೆಗೆ ಮಾತ್ರ ಸೀಮಿತ ಎಂಬ ಭಾವನೆ ಗ್ರಾಮೀಣ ಭಾಗದ ಜನತೆಯದಾಗಿತ್ತು. ಆದರೆ ಕ್ಷೇತ್ರದ ಶಾಸಕರಾಗಿ ಶಿವಲಿಂಗೇಗೌಡರು ಚುನಾಯಿತರಾದ ಬಳಿಕ ನಗರ ಪ್ರದೇಶದಂತೆ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿರುವ ಜನತೆಗೆ ಶುದ್ಧ ಕುಡಿಯುವ ನೀರು, ಚರಂಡಿ ನಿರ್ಮಾಣ, ರಸ್ತೆ ಅಭಿವೃದ್ಧಿ, ವಿದ್ಯುತ್ ದೀಪಗಳ ಅಳವಡಿಕೆ ಹೀಗೆ ಮೂಲಭೂತ ಸೌಕರ್ಯಗಳ ಪೂರೈಕೆ ಗ್ರಾಮೀಣ ಭಾಗದಲ್ಲಿ ಕ್ರಾಂತಿಕಾರಿಯಾಗಿ ನಡೆದಿದ್ದು ಗ್ರಾಮೀಣ ಭಾಗದ ಜನತೆ ಪರವಾಗಿ ಶಾಸಕರು ಹೊಂದಿರುವ ಕಾಳಜಿ ನಮ್ಮೆಲ್ಲರಿಗೂ ಆದರ್ಶವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜನಸಂಪರ್ಕ ಸಭೆಯಲ್ಲಿ ಗೀಜಿಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಹೇಮಾ ಶಿವಕುಮಾರ್, ಮಾಜಿ ಅಧ್ಯಕ್ಷರಾದ ಧರ್ಮಣ್ಣ, ಯಳವಾರೆ ನಾಗಣ್ಣ, ಕೇಶ್ವಣ್ಣ, ಭೈರೇಶ್, ಬೋರನಕೊಪ್ಪಲು ಸ್ವಾಮಣ್ಣ, ಈರಾಬೋವಿ, ಗ್ರೇಡ್ 2 ತಹಶಿಲ್ದಾರ್ ಪಾಲಾಕ್ಷ, ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಅರುಣ್‌ಕುಮಾರ್, ಶಿಕ್ಷಣ ಸುಧಾರಣಾ ಸಮಿತಿಯ ಸದಸ್ಯ ವೈ.ಕೆ. ದೇವರಾಜ್, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಸಾರ್ವಜನಿಕ ಜಾಗೃತಿಗಾಗಿ ನಾಟಕ ಪ್ರದರ್ಶನ

## ವೈವಿಧ್ಯತೆಯಲ್ಲಿಯೂ ಭಾವನೆಗಳನ್ನು ಹೊಂದಿರುವ ದೇಶ ಭಾರತ

• ಪ್ರಜೋದಯ ವರದಿ

**ಹಾಸನ:** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಏಕತಾ ಶಿಬಿರದ ಶಿಬಿರಾರ್ಥಿಗಳಿಂದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬುಧವಾರ ಸಾರ್ವಜನಿಕ ಜಾಗೃತಿ ಸಲುವಾಗಿ ಆಯೋಜಿಸಿದ್ದ ನಾಟಕ ಪ್ರದರ್ಶನವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್ ರಾಜ್ ಸಿಂಗ್, ಜಿಲ್ಲಾಧಿಕಾರಿ ಲತಾಕುಮಾರಿ ವೀಕ್ಷಿಸಿದರು.

ನಂತರ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಹಿಮ್ಸ್ ಕಾಲೇಜಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಏಕತಾ ಶಿಬಿರಕ್ಕೆ ಅನೇಕ ರಾಜ್ಯಗಳಿಂದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಶಿಬಿರವನ್ನು ಪ್ರತಿನಿಧಿಸಿದ್ದಾರೆ. ಇದು ರಾಷ್ಟ್ರೀಯ ಏಕೀಕರಣ ಶಿಬಿರವಾಗಿದ್ದು, ಹಿಮ್ಸ್ ಸಂಸ್ಥೆಗೆ ಸಿಕ್ಕಿರುವ ಅವಕಾಶ, ನಮ್ಮ ಜಿಲ್ಲೆಗೆ ಹೆಮ್ಮೆ ತರುವ ಕಾರ್ಯಕ್ರಮ. ಭಾರತ ದೇಶ ತುಂಬಾ ವೈವಿಧ್ಯಮಯವಾಗಿದ್ದು, ವೈವಿಧ್ಯತೆಯಲ್ಲಿಯೂ ಭಾವನೆಗಳನ್ನು ಹೊಂದಿರುವ ದೇಶವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸಾಮಾಜಿಕ ಪಿಡುಗುಗಳಾದ ಪೋಕ್ಸೋ, ಬಾಲ್ಯ ವಿವಾಹ ಹಾಗೂ ಬಾಲ ಗರ್ಭಿಣಿಯಂತಹ ಪ್ರಕರಣಗಳನ್ನು ತಡೆಯಲು ಬೀದಿ ನಾಟಕ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಈ ರೀತಿಯ ಸಮಸ್ಯೆ ತಡೆಗಟ್ಟಲು ಪ್ರತಿಯೊಬ್ಬರ ಪಾತ್ರ ಮುಖ್ಯವಾಗಿದೆ. ಕಾಲೇಜು ವಿದ್ಯಾರ್ಥಿಗಳು ಬೀದಿ ನಾಟಕದ ಮೂಲಕ ಸಮಾಜಕ್ಕೆ ಸಂದೇಶ ಸಾರಲು ಮುಂದಾಗಿದ್ದಾರೆ ಎಂದರಲ್ಲದೆ, ಇಂತಹ ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಆಯೋಜಿಸುವ ಮೂಲಕ ಬಾಲ್ಯವಿವಾಹ ಮುಕ್ತ ಜಿಲ್ಲೆಯಾಗಿ ಘೋಷಿಸಲು ಶ್ರಮ ವಹಿಸೋಣ ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿಎಂ ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಮತ್ತಿತರರು ಉಪಸ್ಥಿತರಿದ್ದರು.

# ಎಸ್.ಹೊಸಹಳ್ಳಿ ಸಂಘಕ್ಕೆ ನವೀನ್ ಅಧ್ಯಕ್ಷ

## ಉಪಾಧ್ಯಕ್ಷರಾಗಿ ಕಾಂತರಾಜ್ ಆಯ್ಕೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಎಸ್. ಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಎಚ್.ಕೆ.ನವೀನ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎಚ್.ಕೆ.ಕಾಂತರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘಕ್ಕೆ ನಡೆದ ಚುನಾವಣೆಯಲ್ಲಿ 11 ನಿರ್ದೇಶಕರು ಆಯ್ಕೆಯಾಗಿದ್ದರು. ಬುಧವಾರ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಎಚ್.ಕೆ.ನವೀನ್ ಹಾಗೂ ಎಚ್.ಕೆ.ಕಾಂತರಾಜ್ ಹೊರತು ಪಡಿಸಿ ಮತ್ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಚುನಾವಣಾಧಿಕಾರಿ ಬಿ.ಕೆ.ವಿಜಯೇಂದ್ರ, ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.




ಈ ಸಂದರ್ಭದಲ್ಲಿ ನಿರ್ದೇಶಕರಾದ ಗೌರಮ್ಮ ನಾಗೇಗೌಡ, ವಿನೋದ ಸುಕುಮಾರ್, ದ್ರಾಕ್ಷಾಯಿಣಿ ಅರುಣ್ ಕುಮಾರ್, ರಮೇಶ್, ಪಾರ್ವತಮ್ಮ, ಸುಮಾ ವಿಜಯಕುಮಾರ್, ಶೃತಿ ಮಂಜೇಗೌಡ, ಸುಜಾತ ನಾಗರಾಜ್, ಜಯಲಕ್ಷ್ಮಿ ನಾಗರಾಜ್, ಸಂಘದ ಕಾರ್ಯದರ್ಶಿ ಮಂಜೇಗೌಡ, ಹಾಲು ಪರೀಕ್ಷಕ ಎಚ್.ಎಸ್.ನವೀನ್, ರೈತ ಸಂಘದ ಜಿಲ್ಲಾಧ್ಯಕ್ಷ ಮೀಸೆ ಮಂಜಣ್ಣ ಇತರರು ಇದ್ದರು.

ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಹೊಸಹಳ್ಳಿ ಗ್ರಾಮದ ಮುಖಂಡರು ಮತ್ತು ಗ್ರಾಮಸ್ಥರು ಸಿಹಿ ವಿತರಿಸಿ, ಜಯಶಾಲಿಯಾದವರಿಗೆ ಅಭಿನಂದನೆ ಸಲ್ಲಿಸಿದರು.

# ಗುಣಮಟ್ಟದ ವಿದ್ಯುತ್ ಪೂರೈಕೆಗೆ ಪರಿವರ್ತಕಗಳ ಅಳವಡಿಕೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನಲ್ಲಿ ಗುಣಮಟ್ಟದ ವಿದ್ಯುತ್ ಪೂರೈಕೆ ಸಲುವಾಗಿ ಆಕ್ರಮ-ಸಕ್ರಮ ಯೋಜನೆಯಡಿ ಏಳುವರೆ ಸಾವಿರ ಪರಿವರ್ತಕಗಳನ್ನು ಅಳವಡಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಹೌಸಿಂಗ್ ಬೋರ್ಡ್ ಬಳಿಯ ಕೈಗಾರಿಕಾ ಪ್ರದೇಶಕ್ಕೆ 19.5 ಲಕ್ಷ ರೂ. ವೆಚ್ಚದಲ್ಲಿ ಯುಜಿ ಕೇಬಲ್ ಅಳವಡಿಕೆ ಕಾರ್ಯಕ್ಕೆ ಭೂಮಿ ಪೂಜೆ ನೇರವೇರಿಸಿ ಮಾತನಾಡಿದ ಅವರು, ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ನಿಟ್ಟಿನಲ್ಲಿ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಪರಿವರ್ತಕ ಖಾಯಂ ಅಳವಡಿಕೆಗೆ 2 ಕೋಟಿ ರೂ. ವೆಚ್ಚದಲ್ಲಿ ಕಟ್ಟಡಗಳ



ನಿರ್ಮಾಣ, ಆದ್ಯತೆ ಮೇರೆಗೆ 25 ಕೋಟಿ ರೂ. ವೆಚ್ಚದಲ್ಲಿ 50ಲಿಂಕ್ ಲೈನ್ ನಿರ್ಮಾಣ, ಕಲ್ಕೆರೆ ಬಳಿ 220 ಕೆವಿ ರಿಸೀವಿಂಗ್ ಕೇಂದ್ರದ ಸ್ಥಾಪಿತವಾಗಲಿದ್ದು, ಮುಂದಿನ ಎರಡು ತಿಂಗಳೊಳಗೆ ಟೆಂಡರ್ ಪ್ರಕ್ರಿಯೆ ಮುಗಿದು ಕಾಮಗಾರಿ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಾಯಧನದಡಿ ರೈತರಿಗೆ ಹೆಚ್ಚು ಅನುಕೂಲವಾಗುವ ಸೌರ ವಿದ್ಯುತ್ ಪಡೆಯುವ ಕುಸುಮ್ ಬಿ ಯೋಜನೆಗೆ ತಾಲ್ಲೂಕಿನಲ್ಲಿ 400 ರೈತರ ನೊಂದಣಿಯಾಗಿದ್ದು, ಹೆಚ್ಚು ಪ್ರಚಾರದ ಸಲುವಾಗಿ ಉತ್ತಮ ನೊಂದಣಿಯಾಗಿದೆ. ನೊಂದಣಿ ಅವಕಾಶವನ್ನು ಮತ್ತಷ್ಟು ದಿನಗಳ ವಿಸ್ತರಣೆಗೆ ಕೇಂದ್ರ, ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗುವುದು, ಸೌರ ವಿದ್ಯುತ್‌ನಿಂದ ನೀರೆತ್ತುವ ಯೋಜನೆ ಅನುಷ್ಠಾನಕ್ಕೆ 7.5 ಹೆಚ್.ಪಿ.ಗೆ ರೈತರು 81 ಸಾವಿರ ಹಣ ಕಟ್ಟಿದ್ದ ಸೋಲಾರ ಪ್ಯಾನಲ್, ಪೈಪ್ ಸೇರಿ ಅಗತ್ಯ ಸೌಲಭ್ಯವನ್ನು ಇಲಾಖೆ ಒದಗಿಸುತ್ತದೆ ಎಂದರು.

ಚನ್ನರಾಯಪಟ್ಟಣ ನಗರ ಮತ್ತು ಶ್ರವಣಬೆಳಗೊಳಕ್ಕೆ ಸಂಪೂರ್ಣ ಯುಜಿ ಕೇಬಲ್ ಅಳವಡಿಕೆಗೆ ಇಂಧನ ಇಲಾಖೆಗೆ ಪ್ರಸ್ತಾಪ ಸಲ್ಲಿಸಿದ್ದು, ಮೊದಲ ಹಂತದಲ್ಲಿ ಶ್ರವಣಬೆಳಗೊಳಕ್ಕೆ ಅವಕಾಶ ಮಾಡಿಕೊಡುವುದಾಗಿ ಇಲಾಖೆ ಸೂಚಿಸಿದೆ ಎಂದ ಅವರು, ಇಲ್ಲಿನ ಕೈಗಾರಿಕಾ ಪ್ರದೇಶಕ್ಕೆ ರಸ್ತೆ ನಿರ್ಮಿಸಲಾಗಿದ್ದು, ವಾರಕ್ಕೆರೆಡು ಬಾರಿ ಪುರಸಭೆಯಿಂದ ಸ್ವಚ್ಛತೆಗೆ ಸೂಚಿಸಲಾಗುವುದು, ಕೈಗಾರಿಕಾ ಇಲಾಖೆಯಲ್ಲಿ ಅನುದಾನ ಕೊರತೆ ಹಿನ್ನಲೆ ಮುಂದಿನ ಆರ್ಥಿಕ ವರ್ಷದಲ್ಲಿ ಕಾಪೌಂಡ್ ನಿರ್ಮಾಣದ ಬೇಡಿಕೆ ಪೂರೈಸಲಾಗುವುದು ಎಂದು ಅವರು ಹೇಳಿದರು.

ಸೆಸ್ಕ್‌ನ ಕಾರ್ಯಪಾಲಕ ಅಭಿಯಂತರರಾದ ರತ್ನ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಕೃಷ್ಣ, ಹರೀಶ್, ಎಇ ಅಭಿಷೇಕ್, ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ರಮೇಶ್, ಕೈಗಾರಿಕೆಗಳ ಮಾಲೀಕರಾದ ಡಿ.ಸಿ.ನಾಗರಾಜು, ಪ್ರವೀಣ್, ಸ್ಟೀಪನ್, ಶಿವಕುಮಾರ್ ಐಕನಹಳ್ಳಿ, ಬರಗೂರು ಆನಂದ್, ಸೆಕ್ಯೂಬ್, ಗುತ್ತಿಗೆದಾರ ಮೋಹನ್ ಕುಮಾರ್ ಇನ್ನಿತರರು ಇದ್ದರು.

# ಜ.11 ರಂದು ಟೈಮ್ಸ್ ಒಲಿಂಪಿಯಾಡ್ ಪರೀಕ್ಷೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕಲ್ಪಿಸುವ ನಿಟ್ಟಿನಲ್ಲಿ ಸಂಸ್ಥೆ ವತಿಯಿಂದ ಜ.11ರಂದು ಟೈಮ್ಸ್ ಒಲಿಂಪಿಯಾಡ್ ಪರೀಕ್ಷೆ ಆಯೋಜಿಸಲಾಗಿದೆ ಎಂದು ಟೈಮ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಬಿ.ಕೆ.ಗಂಗಾಧರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2025-26 ನೇ ಶೈಕ್ಷಣಿಕ ವರ್ಷದಲ್ಲಿ ಹತ್ತನೇ ತರಗತಿ (ರಾಜ್ಯ, ಪಠ್ಯಕ್ರಮ) ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದರು.

ಚನ್ನರಾಯಪಟ್ಟಣ ಟೈಮ್ಸ್ ಪಿಯು ಕಾಲೇಜಿನಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷಾ ದಿನದಂದು ಆಯ್ದ ನಿಲ್ದಾಣಗಳಿಂದ ಉಚಿತವಾಗಿ ಬಸ್ ವ್ಯವಸ್ಥೆ ಇರುತ್ತದೆ. ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪರೀಕ್ಷೆಯು ಭಾನುವಾರ ಬೆಳಿಗ್ಗೆ 10 ರಿಂದ 11.30 ರವರಿಗೆ ಹಾಗೂ 11.30 ರಿಂದ



ಮಧ್ಯಾಹ್ನ 1 ಗಂಟೆ ವರೆಗೆ ಎರಡು ವಿಭಾಗದಲ್ಲಿ ನಡೆಯಲಿದೆ ಎಂದರು.

ಪರೀಕ್ಷೆಯಲ್ಲಿ ಪಾಲ್ಗೊಂಡು ಅತ್ಯಧಿಕ ಅಂಕಗಳನ್ನು ಪಡೆದ ಆಯ್ದ ವಿದ್ಯಾರ್ಥಿಗಳು ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳಿಗೆ ಶೇಕಡಾ 50 ವಿದ್ಯಾರ್ಥಿ ವೇತನ ಪಡೆಯಲಿದ್ದಾರೆ. ತರಬೇತಿ ಒಳಗೊಂಡು ಪರೀಕ್ಷೆಯ ನೋಂದಣಿ ಉಚಿತವಾಗಿರುತ್ತದೆ. ಸ್ಕ್ಯಾನರ್ ಇಲ್ಲವೇ ಮೊ.ಸಂ- 9731338083, 9901317067 ಹಾಗೂ 6363872009 ನಂಬರ್‌ನ ವಾಟ್ಸಾಪ್ ಮೂಲಕ ನೊಂದಣಿ ಮಾಡಿಕೊಳ್ಳಬೇಕಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಟೈಮ್ಸ್ ಪಿಯು ಕಾಲೇಜಿನ ಪ್ರಾಂಶುಪಾಲ ಸುನೀಲ್, ಆಡಳಿತ ಅಧಿಕಾರಿ ಸಂಜಯ್ ಹಾಗೂ ಶೈಕ್ಷಣಿಕ ಮುಖ್ಯಸ್ಥ ಶ್ರೀಕಂಠ ಇದ್ದರು.

# ನಾಳೆ ಸಿದ್ದರಾಮಯ್ಯ ವೃತ್ತ ನಾಮಕರಣ ಅನಾವರಣ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣ ಹೊರವಲಯದ ಶಂಭುನಾಥಪುರ ಮುಖ್ಯ ರಸ್ತೆ ವೃತ್ತಕ್ಕೆ ಜ.9ರಂದು ಸಿದ್ದರಾಮಯ್ಯ ವೃತ್ತ ಎಂದು ನಾಮಕರಣ ಮತ್ತು ನಾಮಫಲಕ ಅನಾವರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಕೀಲ ಎಸ್.ಎ.ಕೃಷ್ಣ ತಿಳಿಸಿದರು.

ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಸುದೀರ್ಘ ಅವಧಿಗೆ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿದ ಸಂಭ್ರಮಾಚರಣೆ ಪ್ರಯುಕ್ತ ಈ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಶುಂಭುನಾಥಪುರದ ಐತಿಹಾಸಿಕ ಶಂಭುನಾಥೇಶ್ವರ ದೇವಾಲಯದಲ್ಲಿ ಅಭಿಷೇಕ, ಪೂಜೆ ನಡೆಸಿದ ಬಳಿಕ ಪಟ್ಟಣದ ಅನಕೃ ವೃತ್ತದ ವರೆಗೆ ಭವ್ಯ



ಮೆರವಣಿಗೆ ನಡೆಯಲಿದೆ. ದ್ವಿಚಕ್ರ ವಾಹನ ಸವಾರರಿಗೆ ರಸ್ತೆ ಸುರಕ್ಷತೆ ಕುರಿತು ಅರಿವು ಮೂಡಿಸಲು ಅನಕೃ ವೃತ್ತದಲ್ಲಿ 200 ಹೆಲ್ಮೆಟ್ ಗಳನ್ನು ಉಚಿತವಾಗಿ ವಿತರಿಸಲಿದ್ದು ಬೈಕ್ ಸವಾರರಿಂದ ಬೈಕ್ ರ್‍ಯಾಲಿಯನ್ನು ಏರ್ಪಡಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೆ.ಆರ್.ನಗರ ಕನಕ ಗುರು ಪೀಠದ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯ ವಹಿಸುವರು. ಶಾಸಕ ಎ. ಮಂಜು ಉದ್ಘಾಟಿಸಲಿದ್ದು, ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಡಾ.ಎಚ್.ಎಲ್. ರವೀಂದ್ರಪ್ರಸಾದ್ ಅಧ್ಯಕ್ಷತೆ ವಹಿಸುವರು. ಮಾಜಿ ಶಾಸಕ ಎ.ಟಿ. ರಾಮಸ್ವಾಮಿ, ಮುಖಂಡರಾದ ಎಚ್.ಪಿ.ಶ್ರೀಧರ್‌ಗೌಡ, ಎಂ.ಟಿ. ಕೃಷ್ಣೇಗೌಡ, ಎಚ್. ಯೋಗಾರಮೇಶ್, ಸಿ.ಡಿ.ದಿವಾಕರಗೌಡ, ಎಸ್.ಎಸ್ .ಪ್ರಸನ್ನಕುಮಾರ್ ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಎಸ್.ಪಿ. ರೇವಣ್ಣ, ಮುತ್ತಿಗೆ ರಮೇಶ್, ಶೇಖರ್, ಅಹಮದ್, ಸಂತೋಷ್ ಹಾಜರಿದ್ದರು.


# ಪಾರ್ಕಿಂಗ್‌ಗೆ ಸ್ಥಳಾವಕಾಶ ಇಲ್ಲದೆ ಕಿರಿಕಿರಿ

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಟ್ಟಣದ ಮೈಸೂರು ರಸ್ತೆ ದ್ವಿಮುಖ ಸಂಚಾರ ರಸ್ತೆಯಾಗಿದ್ದರೂ ಪಾರ್ಕಿಂಗ್‌ಗೆ ಸ್ಥಳಾವಕಾಶ ಇಲ್ಲದೆ ದಿನನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ವಾಹನ ಸವಾರರು ಕಿರಿಕಿರಿ ಅನುಭವಿಸುವಂತಾಗಿದೆ.

ಮೊನ್ನೆಯಷ್ಟೆ ಕಾರ್ಮಿಕರ ಇಲಾಖೆ ತನ್ನ ಕಚೇರಿ ಬಳಿ ಕಿಟ್ ವಿತರಿಸಲು ಫಲಾನುಭವಿಗಳು ಜಮಾಯಿಸಿದ್ದರಿಂದ ವಾಹನ ಸವಾರರು ಕಿರಿಕಿರಿ ಅನುಭವಿಸಬೇಕಾಯಿತು. ಕಳೆದ 4 ತಿಂಗಳ ಹಿಂದಷ್ಟೆ ಶಿಕ್ಷಕರೊಬ್ಬರು ಇದೇ ಪ್ರದೇಶದಲ್ಲಿ ಬೈಕ್ ಪಾರ್ಕಿಂಗ್ ಮಾಡಿದ್ದ ಸ್ಥಳದಲ್ಲೇ ಬಸ್ ಗುದ್ದಿ ಸಾವನ್ನಪ್ಪಿದರು. ಈ ಘಟನೆ ಮರುಕಳುಹಿಸದಂತೆ ಎಚ್ಚೆತ್ತುಕೊಳ್ಳದೆ ಮತ್ತೆ ಅದೇ ಪ್ರಹಸನ ನಡೆಸಿದ್ದಾರೆ.

ಬಾಡಿಗೆ ಆಧಾರದಲ್ಲಿ ಕಾರ್ಮಿಕರ



ಇಲಾಖೆ ಕಚೇರಿ ನಡೆದಿದೆ. ಶಿಕ್ಷಕರ ಭವನದಲ್ಲಿ ಕಳೆದ ಮಂಗಳವಾರ ಸಾಂಕೇತಿಕವಾಗಿ ಶಾಸಕ ಎಚ್.ಡಿ. ರೇವಣ್ಣರಿಂದ ಆಯಾ ಕಾರ್ಮಿಕರಿಗೆ ಅನುಕೂಲವಾಗುವಂತೆ ಪರಿಕರಗಳ ಕಿಟ್ ವಿತರಿಸಿದ್ದರು. ಅದೇ ಭವನದಲ್ಲಿ ಮತ್ತೊಂದು ದಿನ ಕಿಟ್ ಸಾಮೂಹಿಕವಾಗಿ ವಿತರಿಸುವ ಕಾರ್ಯ ನಡೆಸಬಹುದಿತ್ತು.

ಸಾರ್ವಜನಿಕರು ಎಚ್ಚರಿಸಿದರೂ ಎಚ್ಚೆತ್ತುಕೊಳ್ಳದ ಇಲಾಖೆ ಅವರದ್ದೇ ಕಚೇರಿಯಲ್ಲಿ ಕಿಟ್ ವಿತರಿಸಿದರು. ಇದರಿಂದ ದಿನವಿಡೀ ಸಾವಿರಾರು ಕಾರ್ಮಿಕರು ತಮ್ಮ ವಾಹನಗಳನ್ನು ರಸ್ತೆ ಬದಿ ನಿಲುಗಡೆಗೊಳಿಸಿದ್ದರು. ಹಾಗಾಗಿ ವಾಹನಗಳ ಸಾಲು ಸಾಲು ಜಮಾವಣೆಯಾಗಿತ್ತು. ಹಾಗಾಗಿ ಸಂಚರಿಸುವ ವಾಹನಗಳು ಹರಸಾಹಸ ಪಡುವಂತಾಯಿತು. ಕಾರ್ಮಿಕರ ಇಲಾಖೆ ವಿಸ್ತರಣಾಧಿಕಾರಿ ಯಮುನಾ ಅವರು ಈ ಬಗ್ಗೆ ನಿರ್ಲಕ್ಷ ವಹಿಸಿದ್ದು, ನಮ್ಮ ಕೆಲಸವಾದರಷ್ಟೆ ಎನ್ನುವ ಉದ್ಧಟತನ ತಳೆದಿದ್ದು, ಸಾರ್ವಜನಿಕರ ಆಕ್ಷೇಪಕ್ಕೆ ಗುರಿಯಾಗಿದ್ದಾರೆ.



ಹಾಸನ: ಆಂಧ್ರಪ್ರದೇಶದ ಕಡಪದಲ್ಲಿ ನಡೆದ ಅಸ್ಮಿತಾ ದಕ್ಷಿಣ ವಲಯದ 16 ವರ್ಷದ ಬಾಲಕಿಯರ ರಾಷ್ಟ್ರಮಟ್ಟದ ಹಾಕಿ ಲೀಗ್ ಪಂದ್ಯದಲ್ಲಿ ಕರ್ನಾಟಕ ತಂಡ ಪ್ರಥಮ ಸ್ಥಾನ ಗಳಿಸಿದೆ. ಹಾಸನದ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಎಂ.ಎಲ್.ಕೃತಿಕ ತಂಡವನ್ನು ಪ್ರತಿನಿಧಿಸಿದ್ದಳು. ಶಾಲಾ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ.

# ಸಿದ್ದರಾಮಯ್ಯ ದೀರ್ಘಾವಧಿ ಆಡಳಿತಕ್ಕಾಗಿ ವಿಶೇಷ ಪೂಜೆ

• ಪ್ರಜೋದಯ ವರದಿ

**ಬೇಲೂರು:** ಅವಧಿ ಲೆಕ್ಕದಲ್ಲಿ ದಾಖಲೆ ನಿರ್ಮಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದೀರ್ಘಾಯುಷ್ಯಕ್ಕಾಗಿ ಹಾಗೂ ಮುಂದುವರೆದ ಸಮಗ್ರ ಆಡಳಿತಕ್ಕಾಗಿ ಪಟ್ಟಣದ ಶ್ರೀ ಚೆನ್ನಕೇಶವ ದೇವಸ್ಥಾನದಲ್ಲಿ ತಾಲ್ಲೂಕು ಕಾಂಗ್ರೆಸ್ ಮುಖಂಡರು ವಿಶೇಷ ಪೂಜೆ ನೆರವೇರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಮುಖಂಡ ಬಿ.ಎಂ.ಸಂತೋಷ್ ಅವರು, ಸಿದ್ದರಾಮಯ್ಯ ಸೋಲಿಲ್ಲದ ಸರದಾರ, ಅಹಿಂದ ವರ್ಗಗಳ ನಾಯಕರಾಗಿದ್ದು ಅವರು ಪೂರ್ಣಾವಧಿ ಅಧಿಕಾರ ನಡೆಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಮಹಾನ್ ನಾಯಕ ದೇವರಾಜ ಅರಸು ಅವರ ಆಡಳಿತ ಅವಧಿಯನ್ನು ಸರಿಗಟ್ಟಿರುವುದು ಇತಿಹಾಸಾತ್ಮಕ



ಸಾಧನೆಯಾಗಿದೆ. ಮುಂದಿನ ದಿನಗಳಲ್ಲೂ ರಾಜ್ಯದ ಹಿತಕ್ಕಾಗಿ ಇನ್ನಷ್ಟು ಕಾಲ ಅಧಿಕಾರ ನಡೆಸುವ ಶಕ್ತಿ ಹಾಗೂ ನಾಯಕರ ಬೆಂಬಲ ದೊರಕಲಿ ಎಂದು ದೇವರಲ್ಲಿ ಪ್ರಾರ್ಥಿಸಲಾಗಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರನ್ನು ಭಾಗ್ಯಗಳ ಸರದಾರ ಎಂದು ಕರೆಯುವುದು ತಪ್ಪಲ್ಲ. ವಿವಿಧ ಜನಪರ ಭಾಗ್ಯ ಯೋಜನೆಗಳ ಮೂಲಕ ಕರ್ನಾಟಕ ಸುಭಿಕ್ಷವಾಗಿದ್ದು, ಜನರು ಅವುಗಳನ್ನು ಸದುಪಯೋಗಪಡಿಸಿಕೊಂಡು ಮುಖ್ಯಮಂತ್ರಿಗೆ ಆಶೀರ್ವಾದ ಮಾಡುತ್ತಿದ್ದಾರೆ. 5 ಗ್ಯಾರಂಟಿ ಯೋಜನೆಗಳ ಒಡೆಯರಾಗಿರುವ ಅವರು, ವಿಶೇಷವಾಗಿ ಅನ್ನಭಾಗ್ಯ ಯೋಜನೆಯ ಮೂಲಕ ಅಪಾರ ಜನಪ್ರಿಯತೆ ಗಳಿಸಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಆಸ್ಪತ್ರೆಯ ರೋಗಿಗಳಿಗೆ ಹಾಲು ಹಾಗೂ ಹಣ್ಣುಗಳನ್ನು ವಿತರಿಸಲಾಯಿತು ಎಂದು ತಿಳಿಸಿದರು.

ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿ ಬಿ.ಎಂ.ರಂಗನಾಥ್ ಮಾತನಾಡಿ, ರಾಜ್ಯ ಕಂಡ ದೀಮಂತ ನಾಯಕ, ಅಹಿಂದ ವರ್ಗಗಳ ಆಶಾಕಿರಣ ಹಾಗೂ ರಾಜ್ಯದ ಹಿತ ಕಾಯುವ ಶಕ್ತಿಶಾಲಿ ನಾಯಕರೆಂದರೆ ಸಿದ್ದರಾಮಯ್ಯ ಅವರೇ ಎಂದು ಶ್ಲಾಘಿಸಿದರಲ್ಲದೆ, ರಾಜ್ಯವನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವಲ್ಲಿ ಯಶಸ್ವಿಯಾದ ಮೊದಲ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದರು.

ಈ ಸಂದರ್ಭದಲ್ಲಿ ಹಾಲು ಮತದ ತಾಲ್ಲೂಕು ಅಧ್ಯಕ್ಷ ಉಮಾಶಂಕರ, ಮಂಜುನಾಥ್, ನರಸಿಂಹ, ಬಸವರಾಜ್, ರಾಜಣ್ಣ, ರಾಕೇಶ್, ತಸ್ಮೈನ್, ಪ್ರಸನ್ನ, ಸುರೇಶ್, ನಾಗರಾಜ್, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಹಾಸನದ ಜಿಲ್ಲಾಧಿಕಾರಿಗಳ ನ್ಯಾಯಾಲಯ ಹಾಸನ

**ಆರ್.ಪಿ. ನಂ:** 09/2024-25

ರಿವಿಜನ್ ಅರ್ಜಿದಾರರು : ನಾಜೀಮ್ ಪಾಷ ಬಿನ್ ಅಬ್ದುಲ್ ಗಫರ್
ಸುಮಾರು 45 ವರ್ಷ
ಕಲ್ಲೇನಹಳ್ಳಿ ಗ್ರಾಮ, ಶಾಂತಿಗ್ರಾಮ ಹೋಬಳಿ
ಮೊಸಳೆ ಹೊಸಳ್ಳಿ ಅಂಚೆ, ಹಾಸನ ತಾಲ್ಲೂಕು.

**ವಿರುದ್ಧ**

ರೆಸ್ಪಾಂಡೆಂಟರು :
1. ಅನ್ವರ್ ಹುಸೇನ್ ಬಿನ್ ಲೇಟ್ ಸಾಬುಸಾಬ್
2. ಪ್ಯಾರೇಜಾನ್ ಬಿನ್ ಲೇಟ್ ಸಾಬುಸಾಬ್
3. ಜಲೀಲ್ ಪಾಷ ಬಿನ್ ಲೇಟ್ ಸಾಬುಸಾಬ್
4. ನಿಸಾರ್ ಪಾಷ ಬಿನ್ ಲೇಟ್ ಸಾಬುಸಾಬ್
5. ಸರ್ದಾರ್ ಪಾಷಾ ಬಿನ್ ಸಾಬುಸಾಬ್

1 ರಿಂದ 5ನೇ ರೆಸ್ಪಾಂಡೆಂಟರುಗಳು
1ನೇ ಅಡ್ಡರಸ್ತೆ, ಬೆಸ್ತರ ಬೀದಿ, ಚಿಪ್ಪಿನಕಟ್ಟೆ ಬಡಾವಣೆ
ಹಾಸನ ನಗರ ನಿವಾಸಿಗಳು

6. ಮಹಮ್ಮದ್‌ಗೌಸ್ ಬಿನ್ ಲೇಟ್ ಅಬ್ದುಲ್‌ಸಾಬ್
ಟಿಪ್ಪುನಗರ, ಗೌಸಿಯಾ ಮಸೀದಿ ಹಿಂಭಾಗ, ಹಾಸನ.
7. ಅಬ್ದುಲ್‌ಖಾದರ್, ಫೌತಿ: ವಾರಸುದಾರರು
(ಎ) ಅಜೀಜ್ ಪಾಷಾ ಬಿನ್ ಅಬ್ದುಲ್‌ಖಾದರ್
(ಬಿ) ಮುಕ್ತಾರ್ ಪಾಷಾ ಬಿನ್ ಅಬ್ದುಲ್ ಖಾದರ್
8. ಅಬ್ದುಲ್ ವಾಜಿದ್ ಬಿನ್ ಅಬ್ದುಲ್ ಸಾಬ್,
2ನೇ ಕ್ರಾಸ್, ವಲ್ಲಭಾಯಿರಸ್ತೆ, ಹಾಸನ.
9. ಶೇಟ್‌ಅಹಮ್ಮದ್ ಬಿನ್ ಅಬುಲ್ಲಾ ಸಾಬ್,
ಇಲಾಹಿನಗರ, ಎ.ಪಿ.ಹಾಲ್ ಹತ್ತಿರ, ಹಾಸನ.
10. ಕೆ.ಎ.ಅಬ್ದುಲ್ ಗಫಾರ್ ಬಿನ್ ಅಬ್ದುಲ್ಲಾ ಸಾಬ್
11. ಶ್ರೀಮತಿ ಸಕೀಲಾ ಬಾನು ಕೋಂ ಲೇಟ್ ಕಲಂದರ್ ಸಾಬ್
12. ಶ್ರೀಮತಿ ಸಕೀರಾ ಬಾನು ಕೋಂ ಲೇಟ್ ಕಲಂದರ್ ಸಾಬ್

**ಪತ್ರಿಕಾ ಪ್ರಕಟಣೆ**

ಈ ಮೇಲ್ಕಂಡ ಪ್ರಕರಣವನ್ನು ಹಾಸನದ ಉಪ ವಿಭಾಗಾಧಿಕಾರಿಯವರು ತಮ್ಮ ನ್ಯಾಯಾಲಯದ ಆರ್.ಎ. ನಂ. 70/10-11 ರಲ್ಲಿ ದಿನಾಂಕ: 07/11/2012 ರಂದು ಮಾಡಿರುವ ಆದೇಶವನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ದಾಖಲಿಸಿದ್ದು ಈ ಮೇಲ್ಕಂಡ ಪ್ರಕರಣದಲ್ಲಿ ರೆಸ್ಪಾಂಡೆಂಟರ ಮೃತ ವಾರಸುದಾರರಿಗೆ ಸಮನ್ಸ್ ಜಾರಿಯಾಗದ ಕಾರಣ ಪತ್ರಿಕಾ ಪ್ರಕಟಣೆಯ ಮೂಲಕ ಈ ಮೇಲ್ಕಂಡ ಪ್ರಕರಣದ ಬಗ್ಗೆ ಪತ್ರಿಕಾ ಪ್ರಕಟಣೆ ಮಾಡುತ್ತಿದ್ದು, ಸದರಿ ಈ ಮೇಲ್ಕಂಡ ಪ್ರಕರಣದ ವಿರುದ್ಧ ಕಾರಣವನ್ನು ನೀಡಿ ತಕರಾರು ಸಲ್ಲಿಸುವಂತಿದ್ದರೆ ದಿನಾಂಕ: 29-01-2026 ರಂದು ಪೂರ್ವಾಹ್ನ 03 ಗಂಟೆಗೆ ನೀವುಗಳು ಖುದ್ದಾಗಿ ಅಥವಾ ನಿಮ್ಮ ಪರ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ಇದಕ್ಕೆ ತಪ್ಪಿದರೆ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಮತ್ತು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

2026ನೇ ವರ್ಷದ ಜನವರಿ ತಿಂಗಳ 5ನೇ ದಿವಸದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ (ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ) ಮೊಹರಿನೊಡನೆ ನೀಡಲಾಗಿದೆ.

ವಾದಿಯ ಪರ ವಕೀಲರು
ಕೆ.ಆರ್.ಮಂಜೇಗೌಡ, ವಕೀಲರು
ಬಿ.ಎ.ಎಲ್.ಎಲ್.ಬಿ.
ಒಕ್ಕಲಿಗರ ಸಂಘದ ಬಿಲ್ಡಿಂಗ್,
ಬಿ.ಎಂ. ರಸ್ತೆ, ಹಾಸನ- 573201

ಶಿರಸ್ತೇದಾರ್
ಜಿಲ್ಲಾಧಿಕಾರಿಗಳ ಕಚೇರಿ
ಅಪೀಲು ಶಾಖೆ

## ಅತಿದೊಡ್ಡ ಸಾಲಗಾರ ಸಿ.ಎಂ. ಸಿದ್ದರಾಮಯ್ಯ

**ಬೆಂಗಳೂರು:** ಜನವರಿಯಿಂದ ಮಾರ್ಚ್ ವರೆಗಿನ ನಾಲ್ಕನೇ ತ್ರೈಮಾಸಿಕದಲ್ಲಿ ರಾಜ್ಯವು 93,000 ಕೋಟಿ ರೂ. ಸಾಲ ಪಡೆಯುವ ಸಾಧ್ಯತೆಯಿದೆ ಎಂಬ ವರದಿಗಳನ್ನು ಉಲ್ಲೇಖಿಸಿ, ವಿರೋಧ ಪಕ್ಷ ಬಿಜೆಪಿ ಬುಧವಾರ ಸಿದ್ದರಾಮಯ್ಯ ಅವರನ್ನು 'ಅತಿದೊಡ್ಡ ಸಾಲ ಪಡೆಯುವ ಮುಖ್ಯಮಂತ್ರಿ' ಎಂದು ಕರೆದಿದೆ.

ಕರ್ನಾಟಕದಲ್ಲಿ ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ದಾಖಲೆ ಬರೆದ ದಿನವೇ, ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ದರಾಮಯ್ಯ ಅವರನ್ನು ವಿರೋಧ ಪಕ್ಷವು ತೀವ್ರವಾಗಿ ಟೀಕಿಸಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, 'ಸಿದ್ದರಾಮಯ್ಯ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಮುಖ್ಯಮಂತ್ರಿಯಲ್ಲ, ಬದಲಿಗೆ ಅತಿ ಹೆಚ್ಚು ಸಾಲ ಪಡೆಯುವ ಮುಖ್ಯಮಂತ್ರಿ' ಎಂದು ಅವರು ತೀವ್ರವಾಗಿ ಟೀಕಿಸಿದರು.

## ಕಾಂಗ್ರೆಸ್ ಹೈಕಮಾಂಡ್ ವಿಧಿಯಿಲ್ಲದೆ ಸಿದ್ದು ನಾಯಕತ್ವವನ್ನು ಒಪ್ಪಿಕೊಂಡಿದೆ | ವಿಶ್ವನಾಥ್ ವಾಗ್ದಾಳಿ

# ಸಿದ್ದರಾಮಯ್ಯ, ಯಾವ ಅಹಿಂದ ನಾಯಕ? ಕೃತಜ್ಞತೆಯೇ ಇಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ಕಾಂಗ್ರೆಸ್ ಹೈಕಮಾಂಡ್ ಸುತ್ತಿಗೆ ಹಿಡಿದುಕೊಂಡು ಕೂತಿದೆ. ಯಾವಾಗ ಹೊಡೆಯುತ್ತದೆಯೋ ಗೊತ್ತಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ಸುದ್ದಿಗಾರೊಂದಿಗೆ ಮಾತನಾಡಿದ ಅವರು, ಕೆಲವು ಕಾರಣಗಳಿಂದ ಕಾಂಗ್ರೆಸ್ ಹೈಕಮಾಂಡ್ ವಿಧಿಯಿಲ್ಲದೆ ಸಿದ್ದರಾಮಯ್ಯ ನಾಯಕತ್ವವನ್ನು ಒಪ್ಪಿಕೊಂಡಿದೆ. ಹಾಗೆಂದು ಅವರನ್ನು ಪೂರ್ಣ ಅವಧಿಗೆ ನೀವೇ ಸಿಎಂ ಎಂದು ಹೇಳಿಲ್ಲ. ಸಮಯ ಸಂದರ್ಭ ಬಂದಾಗ ಹೊಡೆಯುತ್ತಾರೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಪಕ್ಷ ಎಂದರೇನೆ ಅಹಿಂದ. ಕಾಂಗ್ರೆಸ್ ವಾಸ್ತವ ಹೀಗಿರುವಾಗ ಸಿದ್ದರಾಮಯ್ಯ ಯಾವ ಅಹಿಂದ ನಾಯಕ ಎಂದು ಪ್ರಶ್ನೆ ಮಾಡಿದ ಅವರು, ಸಿದ್ದರಾಮಯ್ಯನವರಿಗೆ ಕೃತಜ್ಞತೆ ಎಂಬುದೇ ಇಲ್ಲ. ತಮನ್ನು ಬೆಳೆಸಿದವರನ್ನೇ ಮುಗಿಸುವುದು ಅವರ ರಾಜಕಾರಣದ ಅಜೆಂಡಾ. ಈವರೆಗೂ ಅವರು ಯಾವ ನಾಯಕತ್ವವನ್ನು ಬೆಳೆಸಿದ್ದಾರೆ? ಅಧಿಕಾರದ ಲಾಲಸೆ-ಸ್ವಾರ್ಥ ತುಂಬಿ ತುಳುಕುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಪಕ್ಷಕ್ಕೆ ಯಾವಾಗಲೂ ಬೆಂಬಲವಾಗಿ ನಿಂತಿದ್ದಾರೆ. ಈ ಸಮುದಾಯ ಸಿದ್ದರಾಮಯ್ಯನವರ ನಾಯಕತ್ವದ ಕಾರಣಕ್ಕಾಗಿ ಮತ ಹಾಕುತ್ತಿಲ್ಲ. ನಾಳೆ ಸಿದ್ದರಾಮಯ್ಯ ಇಲ್ಲದಿದ್ದರೂ ಈ ಸಮುದಾಯದ ಮೊತ್ತ ಬಂದೇ ಬರುತ್ತದೆ. ಕೆಲವರು ತಮ ಕುರ್ಚಿ ಉಳಿಸಿಕೊಳ್ಳಲು ಸಿಎಂ ಅವರ ನಾಯಕತ್ವವನ್ನು ಗುಣಗಾನ ಮಾಡುತ್ತಿದ್ದಾರೆಂದು ವಿಶ್ವನಾಥ್ ಅವರು ವ್ಯಂಗ್ಯವಾಡಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ದಾಖಲೆಯನ್ನು ಸಿದ್ದರಾಮಯ್ಯ ಮುರಿದು ಹಾಕಿದ್ದಾರೆ ಎಂದು ಎಲ್ಲೆಡೆ ಗುಣಗಾನವಾಗುತ್ತಿದೆ. ಅರಸು ಮಾಡಿದ ದಾಖಲೆಗಳನ್ನು ಯಾರಾದರೂ ಮುರಿಯಲು ಸಾಧ್ಯವೇ? ಕರ್ನಾಟಕದಲ್ಲಿ ಮತ್ತೆ ಅಂತಹ ನಾಯಕತ್ವ ಹುಟ್ಟಿ ಬರಲು ಸಾಧ್ಯವೇ ಇಲ್ಲ. ಎಲ್ಲಿಯ ದೇವರಾಜ ಅರಸು, ಎಲ್ಲಿಯ ಸಿದ್ದರಾಮಯ್ಯ, ಅಧಿಕಾರವನ್ನೇ ತ್ಯಾಗ ಮಾಡಿದವರು ಅರಸು. ಅಧಿಕಾರಕ್ಕಾಗಿ ಇನ್ನೊಬ್ಬರನ್ನು ತುಳಿದವರು ಸಿದ್ದರಾಮಯ್ಯ, ಇಬ್ಬರಿಗೂ ಹೋಲಿಕೆ ಮಾಡುವುದೇ ಮಹಾ ಮೂರ್ಖತನ. ಇದು ಆನೆ ಮತ್ತು ಇರುವೆಯಷ್ಟೇ



ವ್ಯತ್ಯಾಸ ಎಂದು ಕಿಡಿಕಾರಿದರು.

ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಅರಸು ಅಂದು ಎಲ್ಲರನ್ನೂ ಎದುರು ಹಾಕಿಕೊಂಡು ಹಾವನೂರು ವರದಿಯನ್ನು ಜಾರಿ ಮಾಡಿದರು ಇದರ ಪರಿಣಾಮ. ಸಣ್ಣ ಸಣ್ಣ ಸಮುದಾಯಗಳಿಗೂ ರಾಜಕೀಯ ಪ್ರಾತಿನಿಧ್ಯ ಸಿಕ್ಕಿದ್ದು. ಇಂದು ಹಿಂದುಳಿದವರ ಮನೆಗಳಲ್ಲಿ ಎಸಿ-ಡಿಸಿ ತಹಸೀಲ್ದಾರ್ ಅಧಿಕಾರಿಗಳು ಇದ್ದಾರೆಂದರೆ ಅದಕ್ಕೆ ಅರಸು ಕಾರಣ. ಇದು ಅವರ ಕೊಡುಗೆ ಎಂದು ಅವರು ಪ್ರಶಂಸಿಸಿದರು.

ಇದೇ ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಜಾತಿ ಜನಗಣತಿ ಸಮೀಕ್ಷೆ ನಡೆಸಿದರು. ಕಾಂತರಾಜ್ ಆಯೋಗದ ವರದಿಯನ್ನು ಇವರೇ ಬಿಡುಗಡೆ ಮಾಡಲಿಲ್ಲ, ವರದಿ ಪೂರ್ಣಗೊಂಡ ನಂತರ ಅದನ್ನು ಕಸದ ಬುಟ್ಟಿಗೆ ಹಾಕಿದ್ದರು. ಇಂಥವರು ಹಿಂದುಳಿದ ವರ್ಗದವರ ಬಗ್ಗೆ ಮಾತನಾಡುವುದೇ ಹಾಸ್ಯಾಸ್ಪದ ಎಂದು ವಿಶ್ವನಾಥ್ ವ್ಯಂಗ್ಯವಾಡಿದರು.

10 ವರ್ಷಗಳಿಂದ ಆಯೋಗದ ವರದಿಯನ್ನು ಸಿದ್ದರಾಮಯ್ಯ ತಿರುಗಿ ನೋಡಿರಲಿಲ್ಲ. ಕಾಂತರಾಜ್ ಆಯೋಗದ ವರದಿಯನ್ನು ಏಕೆ ತಿರಸ್ಕರಿಸಿದ್ದರು. ಹೈಕಮಾಂಡ್ ಬೇಡ ಎಂದು ಹೇಳಿದ್ದಕ್ಕೆ ಅದನ್ನು ಮುಚ್ಚಿ ಹಾಕಿದರು. ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ ಮೇಲೆ ಹಿಂದುಳಿದ ವರ್ಗಗಳ ಆಯೋಗದಿಂದ ಸಮೀಕ್ಷೆ ನಡೆಸಲಾಯಿತು. ದಿನಗಳಲ್ಲಿ ದಾಖಲೆಗಳನ್ನು ಸಿದ್ದರಾಮಯ್ಯ ಮುರಿದಿರಬಹುದು. ಅಂದ ಮಾತ್ರಕ್ಕೆ ಅರಸುರವರು ಮಾಡಿದ ದಾಖಲೆಗಳನ್ನು ಇನ್ನೂ 10 ಜನ ಎತ್ತಿ ಬಂದರೂ ಮುರಿಯುವುದಿಲ್ಲ ಎಂದು ವಿಶ್ವನಾಥ್ ಅವರು ವಾಗ್ದಾಳಿ ನಡೆಸಿದರು.

